ಕರ್ನಾಟಕ ಸರ್ಕಾರ
ಪಂಚಾಯತ್ ರಾಜ್ ಆಯುಕ್ತಾಲಯ
ಕಾಳಿದಾಸ ರಸ್ತೆ, ಗಾಂಧಿನಗರ ಬೆಂಗಳೂರು – 560 009

ಸಂಖ್ಯೆ:ಕಪಂರಾಆ/ಅಭಿವೃದ್ಧಿ/343 (ಭಾಗ-2)/2023 ದಿನಾಂಕ:14.09.2023
c.no: 1145334

# ಜಂಟಿ ಸುತ್ತೋಲೆ

**ವಿಷಯ:** ಗ್ರಾಮ ಪಂಚಾಯಿತಿ ಮಟ್ಟದಲ್ಲಿ **"ಕೂಸಿನ ಮನೆ"** ಶೀರ್ಷಿಕೆಯಡಿ ಶಿಶುಪಾಲನಾ ಕೇಂದ್ರಗಳನ್ನು ಸ್ಥಾಪಿಸುವ ಕುರಿತು.

**ಉಲ್ಲೇಖ:1.** ಜುಲೈ 2023, ಆಯವ್ಯಯ 2023-24ರ ಕಂಡಿಕೆ 207ರಲ್ಲಿ ಘೋಷಿಸಿದಂತೆ.

**2.** ಆದೇಶ ಸಂಖ್ಯೆ:ಕಪಂರಾಆ/ಅಭಿವೃದ್ಧಿ/157/2023 ಬೆಂಗಳೂರು, ದಿನಾಂಕ:30.03.2023

********

ಮೇಲ್ಕಂಡ ವಿಷಯಕ್ಕೆ ಸಂಬಂದಿಸಿದಂತೆ ಉಲ್ಲೇಖ (1)ರ, ಕರ್ನಾಟಕ ಸರ್ಕಾರದ ಆಯವ್ಯಯ 2023-24ರ ಕಂಡಿಕೆ 207 ರಲ್ಲಿ ಘೋಷಿಸಿದಂತೆ ನರೇಗಾ ಯೋಜನೆಯನ್ನು ಅತ್ಯುತ್ತಮವಾಗಿ ಅನುಷ್ಠಾನಗೊಳಿಸುತ್ತಿರುವ 4000 ಗ್ರಾಮ ಪಂಚಾಯಿತಿಗಳಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಸಹಯೋಗದೊಂದಿಗೆ ನರೇಗಾ ಕ್ರಿಯಾಶೀಲ ಉದ್ಯೋಗ ಕಾರ್ಡ್ ಹೊಂದಿರುವ ಕುಟುಂಬದ 3 ವರ್ಷದೊಳಗಿನ ಮಕ್ಕಳಿಗೆ ಶಿಶುಪಾಲನಾ ಕೇಂದ್ರಗಳನ್ನು **"ಕೂಸಿನ ಮನೆ"** ಎಂಬ ಹೆಸರಿನಲ್ಲಿ ಪ್ರಾರಂಭಿಸಲು ಉದ್ದೇಶಿಸಲಾಗಿದೆ.

ಇದರಿಂದ, ಗ್ರಾಮೀಣ ಪ್ರದೇಶದಲ್ಲಿ ನರೇಗಾ ಯೋಜನೆಯಡಿಯಲ್ಲಿ ಮಹಿಳೆಯರಿಗೆ ಹೆಚ್ಚಿನ ಉದ್ಯೋಗಾವಕಾಶಗಳನ್ನು ಕಲ್ಪಿಸಲು ಸಾಧ್ಯವಾಗುತ್ತದೆ. ದುಡಿಯುವ ಮಹಿಳೆಯರು ನೆಮ್ಮದಿಯಿಂದ ಕೆಲಸ ಮಾಡಲು ಮತ್ತು ಅವರ ಮಕ್ಕಳಿಗೆ ಸುರಕ್ಷತೆ, ಪೂರಕ ಪೌಷ್ಠಿಕ ಆಹಾರ ಸೌಲಭ್ಯ ಒದಗಿಸಲು ಸಹಕಾರಿಯಾಗುವಂತೆ ಪ್ರಸ್ತುತ, ಆರ್ಥಿಕ ವರ್ಷದಲ್ಲಿ ಒಟ್ಟು 4000 ಶಿಶುಪಾಲನಾ ಕೇಂದ್ರಗಳನ್ನು ನರೇಗಾ ಯೋಜನೆಯಡಿ ಅತೀ ಹೆಚ್ಚು ಮಾನವ ದಿನಗಳನ್ನು ಸೃಜಿಸಿರುವ ಗ್ರಾಮ ಪಂಚಾಯಿತಿಗಳಲ್ಲಿ ಪ್ರಾರಂಭಿಸಲಾಗುತ್ತಿದೆ.

ಈ ಹಿನ್ನೆಲೆಯಲ್ಲಿ ಶಿಶುಪಾಲನಾ ಕೇಂದ್ರಗಳ ಅನುಷ್ಠಾನ, ಉಸ್ತುವಾರಿ ಮತ್ತು ಸಮರ್ಪಕ ಕಾರ್ಯನಿರ್ವಹಣೆಗಾಗಿ ರಾಜ್ಯ, ಜಿಲ್ಲೆ, ತಾಲ್ಲೂಕು ಹಾಗೂ ಶಿಶುಪಾಲನಾ ಕೇಂದ್ರಗಳ ಹಂತದಲ್ಲಿ ಕೆಳಕಂಡಂತೆ ಸಮಿತಿಗಳನ್ನು ರಚಿಸಲಾಗಿದೆ.

**ಸಮಿತಿಗಳು:-**

**I. ರಾಜ್ಯ ಮಟ್ಟದ ಚಾಲನಾ ಸಮಿತಿ (State Level Steering Committee)**

| ಕ್ರ. ಸಂ. | ಅಧ್ಯಕ್ಷರು/ ಸದಸ್ಯರು | ಪದನಾಮ |
|---|---|---|
| 1 | ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ (ಪಂ.ರಾಜ್) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, | ಅಧ್ಯಕ್ಷರು. |
| 2. | ಕಾರ್ಯದರ್ಶಿಗಳು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ. | ಉಪಾಧ್ಯಕ್ಷರು. |
| 3. | ಆಯುಕ್ತರು, ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ. | ಸದಸ್ಯರು |
| 4. | ಆಯುಕ್ತರು, ಗ್ರಾಮೀಣಾಭಿವೃದ್ಧಿ (MGNREGA), ಆಯುಕ್ತಾಲಯ. | ಸದಸ್ಯರು |
| 5. | ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ. | ಸದಸ್ಯರು |
| 6. | ಅಭಿಯಾನ ನಿರ್ದೇಶಕರು, ರಾಷ್ಟ್ರೀಯ ಜೀವನೋಪಾಯ ಅಭಿಯಾನ. | ಸದಸ್ಯರು |
| 7. | ಅಭಿಯಾನ ನಿರ್ದೇಶಕರು, ರಾಷ್ಟ್ರೀಯ ಆರೋಗ್ಯ ಅಭಿಯಾನ (NHM) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ. | ಸದಸ್ಯರು. |
| 8. | ನಿರ್ದೇಶಕರು, ಇ-ಆಡಳಿತ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ. | ಸದಸ್ಯರು |
| 9. | ಮೊಬೈಲ್ ಕ್ರಶ್, ಸ್ವಯಂ ಸೇವಾ ಸಂಸ್ಥೆ, ದೆಹಲಿ | ಸದಸ್ಯರು |
| 10. | CRISP ಸಂಸ್ಥೆ, ಬೆಂಗಳೂರು. | ಸದಸ್ಯರು. |
| 11. | ನಿರ್ದೇಶಕರು(ಅಭಿವೃದ್ಧಿ), ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ, | ಸದಸ್ಯ ಕಾರ್ಯದರ್ಶಿಗಳು. |

**ನಿರ್ವಹಿಸಬೇಕಾದ ಜವಾಬ್ದಾರಿಗಳು/ಕಾರ್ಯಗಳು:-**

- ಸಂಬಂಧಿಸಿದ ಎಲ್ಲಾ ಇಲಾಖೆಗಳ ಸಹಯೋಗದಲ್ಲಿ ಯೋಜನೆ ಅನುಷ್ಠಾನಕ್ಕೆ ಸಂಬಂಧಿಸಿದಂತೆ ನೀತಿ ರೂಪಣೆ, ಸರ್ಕಾರಿ ಆದೇಶ, ಮಾರ್ಗಸೂಚಿಗಳನ್ನು ಹೊರಡಿಸಲು ನಿರ್ದೇಶನ ನೀಡುವುದು.
- ಸಂಬಂಧಿಸಿದ ಇಲಾಖೆಯಿಂದ ಶಿಶುಪಾಲನಾ ಕೇಂದ್ರಗಳ ಕಾರ್ಯಾಚರಣೆಗೆ ಅಗತ್ಯ ಸಂಪನ್ಮೂಲಗಳನ್ನು ಹಾಗೂ ಬೆಂಬಲವನ್ನು ಪಡೆಯುವ ಸಲುವಾಗಿ ಅಗತ್ಯ ಕ್ರಮಗಳನ್ನು ನಿರ್ಧರಿಸುವುದು.
- ರಾಜ್ಯ ಮಟ್ಟದಲ್ಲಿ ಪ್ರಗತಿ ಪರಿಶೀಲನೆ ಮಾಡಲು ಅನುವಾಗುವಂತೆ ಪಂಚತಂತ್ರ 2.0 ತಂತ್ರಾಂಶದ ಅಭಿವೃದ್ಧಿ ಪಡಿಸಲು ಅಗತ್ಯ ನಿರ್ದೇಶನಗಳನ್ನು ನೀಡುವುದು.

## ನಿರ್ವಹಿಸಬೇಕಾದ ಜವಾಬ್ದಾರಿಗಳು/ಕಾರ್ಯಗಳು:-

- ಸಂಬಂಧಿಸಿದ ಎಲ್ಲಾ ಇಲಾಖೆಗಳ ಸಹಯೋಗದಲ್ಲಿ ಯೋಜನೆ ಅನುಷ್ಠಾನಕ್ಕೆ ಸಂಬಂಧಿಸಿದಂತೆ ನೀತಿ ರೂಪಣೆ, ಸರ್ಕಾರಿ ಆದೇಶ, ಮಾರ್ಗಸೂಚಿಗಳನ್ನು ಹೊರಡಿಸಲು ನಿರ್ದೇಶನ ನೀಡುವುದು.
- ಸಂಬಂಧಿಸಿದ ಇಲಾಖೆಯಿಂದ ಶಿಶುಪಾಲನಾ ಕೇಂದ್ರಗಳ ಕಾರ್ಯಾಚರಣೆಗೆ ಅಗತ್ಯ ಸಂಪನ್ಮೂಲಗಳನ್ನು ಹಾಗೂ ಬೆಂಬಲವನ್ನು ಪಡೆಯುವ ಸಲುವಾಗಿ ಅಗತ್ಯ ಕ್ರಮಗಳನ್ನು ನಿರ್ಧರಿಸುವುದು.
- ರಾಜ್ಯ ಮಟ್ಟದಲ್ಲಿ ಪ್ರಗತಿ ಪರಿಶೀಲನೆ ಮಾಡಲು ಅನುವಾಗುವಂತೆ ಪಂಚತಂತ್ರ 2.0 ತಂತ್ರಾಂಶದ ಅಭಿವೃದ್ಧಿ ಪಡಿಸಲು ಅಗತ್ಯ ನಿರ್ದೇಶನಗಳನ್ನು ನೀಡುವುದು.

**II. ರಾಜ್ಯ ಮಟ್ಟದ ಕಾರ್ಯಕಾರಿ ಸಮಿತಿ (State Level Executive Committee)**

| ಕ್ರ.ಸಂ | ಅಧ್ಯಕ್ಷರು/ ಸದಸ್ಯರು | ಪದನಾಮ |
|---|---|---|
| 1. | ಆಯುಕ್ತರು, ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ, | ಅಧ್ಯಕ್ಷರು. |
| 2. | ಆಯುಕ್ತರು, ಗ್ರಾಮೀಣಾಭಿವೃದ್ಧಿ (MGNREGA), ಆಯುಕ್ತಾಲಯ | ಸದಸ್ಯರು |
| 3. | ಮೊಬೈಲ್ ಕ್ರಶ್, ಸ್ವಯಂ ಸೇವಾ ಸಂಸ್ಥೆ, ದೆಹಲಿ, ಇದರ ಪ್ರತಿನಿಧಿ. | ಸದಸ್ಯರು |
| 4. | ಸಂಪರ್ಕ್ ಸೇವಾ ಸಂಸ್ಥೆ, ಬೆಂಗಳೂರು, ಇದರ ಪ್ರತಿನಿಧಿ. | ಸದಸ್ಯರು |
| 5. | CRISP ಸಂಸ್ಥೆ, ಬೆಂಗಳೂರು, ಇದರ ಪ್ರತಿನಿಧಿ. | ಸದಸ್ಯರು. |
| 6. | ನಿರ್ದೇಶಕರು(ಅಭಿವೃದ್ಧಿ), ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ, ಬೆಂಗಳೂರು. | ಸದಸ್ಯ ಕಾರ್ಯದರ್ಶಿಗಳು |

## ನಿರ್ವಹಿಸಬೇಕಾದ ಜವಾಬ್ದಾರಿಗಳು/ಕಾರ್ಯಗಳು:-

- ಎಲ್ಲಾ ಹಂತಗಳಲ್ಲಿ ವಿಕೇಂದ್ರಿಕರಣ ಮತ್ತು ಸಾಮರ್ಥ್ಯಾಭಿವೃದ್ಧಿ ಮಾಡುವುದರ ಮೂಲಕ ಅನುಮೋದಿತ ಪಾಲುದಾರ ತಾಂತ್ರಿಕ ಸಂಸ್ಥೆ ಬೆಂಬಲದೊಂದಿಗೆ ಯೋಜನೆಗೆ ಸಂಬಂಧಿಸಿದಂತೆ ಸಾಂದರ್ಭಿಕವಾಗಿ ಸೂಕ್ತವಾಗಿರುವ ಅನುಷ್ಠಾನದ ಕಾರ್ಯತಂತ್ರವನ್ನನು ಅಭಿವೃದ್ಧಿ ಪಡಿಸುವುದು.

- ಯೋಜನೆ ಸುಲಲಿತವಾಗಿ ನಡೆಸಲು ಮಾನವ ಮತ್ತು ಆರ್ಥಿಕ ಸಂಪನ್ಮೂಲಗಳನ್ನು ಸಂಬಂಧಪಟ್ಟ ಇಲಾಖೆಗಳ ಸಹಯೋಗದೊಂದಿಗೆ/ ಸಹಕಾರದೊಂದಿಗೆ ಒದಗಿಸುವುದು.
- ಸಾರ್ವಜನಿಕ ಮಾಹಿತಿ, ಸಾಮಾಜಿಕ ಪರಿಶೋಧನೆ, ಕುಂದುಕೊರತೆ ಪರಿಹಾರ ಮತ್ತು ಹೊಣೆಗಾರಿಕೆಯ ಕಾರ್ಯವಿಧಾನಗಳು ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸುವುದನ್ನು ಖಚಿತಪಡಿಸಿಕೊಳ್ಳುವುದು.
- ಯೋಜನೆಗೆ ಸಂಬಂಧಪಟ್ಟಂತೆ ಅಗತ್ಯವಿರುವ ಸರ್ಕಾರಿ ಆದೇಶಗಳು, ಸುತ್ತೋಲೆ ಮತ್ತು ಮಾರ್ಗಸೂಚಿಗಳನ್ನು ಕಾಲಕಾಲಕ್ಕೆ ಹೊರಡಿಸುವುದು.
- ಪ್ರತಿ ತಿಂಗಳಿಗೊಮ್ಮೆ ಯೋಜನೆಯ ಪ್ರಗತಿ ಪರಿಶೀಲನೆಯನ್ನು ಮಾಡಲು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಸಭೆ ನಡೆಸುವುದು.

## III. ಜಿಲ್ಲಾ ಮಟ್ಟದ ಕಾರ್ಯಕಾರಿ ಸಮಿತಿ. (District Level Executive Committee)

| ಕ್ರ. ಸಂ | ಅಧ್ಯಕ್ಷರು/ ಸದಸ್ಯರು | ಪದನಾಮ |
|---|---|---|
| 1. | ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್. | ಅಧ್ಯಕ್ಷರು |
| 2. | ಜಿಲ್ಲಾ ಸಂತಾನೋತ್ಪತ್ತಿ ಮತ್ತು ಮಕ್ಕಳ ಆರೋಗ್ಯ ಅಧಿಕಾರಿಗಳು(RCH), ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ. | ಸದಸ್ಯರು |
| 3. | ಉಪ ನಿರ್ದೇಶಕರು, , ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ. | ಸದಸ್ಯರು |
| 4. | ಜಿಲ್ಲಾ ಕಾರ್ಯಕ್ರಮ ವ್ಯವಸ್ಥಾಪಕರು, ರಾಷ್ಟ್ರೀಯ ಜೀವನೋಪಾಯ ಅಭಿಯಾನ, ಬೆಂಗಳೂರು. | |
| 5. | ಉಪ ಕಾರ್ಯದರ್ಶಿಗಳು(MGNREGA)/ಯೋಜನಾ ನಿರ್ದೇಶಕರು. | ಸದಸ್ಯರು |
| 6. | ಮೊಬೈಲ್ ಕ್ರಶ್ ಸಂಸ್ಥೆಯಿಂದ ಆಯ್ಕೆಯಾದ ಸ್ವಯಂ ಸೇವಾ ಸಂಸ್ಥೆಯ ಮುಖ್ಯಸ್ಥರು. | ಸದಸ್ಯರು. |
| 7. | ಜಿಲ್ಲಾ ಸ್ತ್ರೀ ಶಕ್ತಿ ಒಕ್ಕೂಟ / ಜಿಲ್ಲಾ ಪಂಚಾಯತ್ ಮಹಿಳಾ ಫೇಡರೇಷನ್ ಅಧ್ಯಕ್ಷರು. | ಸದಸ್ಯರು. |

| | | |
|---|---|---|
| 8. | ಜಿಲ್ಲಾ ನಿರೂಪಣಾಧಿಕಾರಿಗಳು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ. | ಸದಸ್ಯ ಕಾರ್ಯದರ್ಶಿಗಳು |

**ನಿರ್ವಹಿಸಬೇಕಾದ ಜವಾಬ್ದಾರಿಗಳು/ಕಾರ್ಯಗಳು:-**

- **"ಕೂಸಿನ ಮನೆ" ಶಿಶುಪಾಲನಾ ಕೇಂದ್ರ**ದ ಮೇಲ್ವಿಚಾರಣಾ ಸಮಿತಿಗಳು ಸಲ್ಲಿಸಿದ ಆಹಾರ ವಿತರಣೆಯ ಬೇಡಿಕೆಯನ್ನು ಪರಿಗಣಿಸಿ ಮಕ್ಕಳಿಗೆ ನೀಡಬೇಕಾಗಿರುವ ಆಹಾರ ವಿತರಣೆಯ ಪಟ್ಟಿಯನ್ನು ನಿರ್ಧರಿಸುವುದು.
- ಆಹಾರ ಪಟ್ಟಿ (Menu) ನಿರ್ಧರಿಸುವ ಸಂದರ್ಭದಲ್ಲಿ ಮಕ್ಕಳಿಗೆ ಸಮತೋಲನಾ ಆಹಾರ ಒದಗಿಸಲು ನಿಗದಿಪಡಿಸಿರುವ ಪೌಷ್ಠಿಕಾಂಶಗಳು ಇರುವುದನ್ನು ಉದಾ: ಪ್ರೋಟೀನ್, ಕ್ಯಾಲೋರಿ ಇತ್ಯಾದಿ ಇರುವುದನ್ನು ಖಚಿತ ಪಡಿಸಿಕೊಳ್ಳುವುದು.
- ಆಹಾರ ಪಟ್ಟಿ (Menu) ನಿರ್ಧರಿಸುವಾಗ ಅಗತ್ಯವಿದ್ದಲ್ಲಿ ತಮ್ಮ ಜಿಲ್ಲೆಯ ಪೌಷ್ಠಿಕ ತಜ್ಞರನ್ನು ಜಿಲ್ಲಾ ಕಾರ್ಯಕಾರಿ ಸಮಿತಿಯ ಸಭೆಗೆ ಆಹ್ವಾನಿಸುವುದು.
- ಸಮಿತಿಯು ಆಹಾರ ಸಾಮಗ್ರಿಗಳು ನಿಗದಿತ ಪ್ರಮಾಣ ಮತ್ತು ಸಮಯದಲ್ಲಿ ಶಿಶುಪಾಲನಾ ಕೇಂದ್ರಕ್ಕೆ ತಲುಪುವುದನ್ನು ಖಚಿತಪಡಿಸಿಕೊಳ್ಳುವುದು.
- ಮಾಸ್ಟರ್ ತರಬೇತುದಾರರನ್ನು ಗುರುತಿಸುವುದು ಮತ್ತು ಅವರ ಸಾಮರ್ಥ್ಯವನ್ನು ಅಭಿವೃದ್ಧಿ ಪಡಿಸಲು ಅನುಮೋದಿತ ಪಾಲುದಾರ ತಾಂತ್ರಿಕ ಸಂಸ್ಥೆಯೊಂದಿಗೆ ವಿವರ ಹಂಚಿಕೊಳ್ಳುವುದು.
- **"ಕೂಸಿನ ಮನೆ" ಶಿಶುಪಾಲನಾ ಕೇಂದ್ರ**ಗಳಿಗೆ ಸಂಬಂಧಿಸಿದ ಕೆಲಸ ಮಾಡುತ್ತಿರುವ ಜಿಲ್ಲಾ ಮಟ್ಟದ ಸಂಘಟನೆಗಳ ಮ್ಯಾಪಿಂಗನ್ನು ಅನುಮೋದಿತ ಪಾಲುದಾರ ತಾಂತ್ರಿಕ ಸಂಸ್ಥೆಯ ಮೂಲಕ ನಿರ್ವಹಿಸುವುದು.
- ಕಾರ್ಯಕ್ರಮದ ಪ್ರಗತಿ ಪರಿಶೀಲನೆಯನ್ನು ಪ್ರತಿ ತಿಂಗಳಿಗೊಮ್ಮೆ ಕೈಗೊಳ್ಳುವುದು.

## IV. ತಾಲ್ಲೂಕು ಮಟ್ಟದ ಕಾರ್ಯಕಾರಿ ಸಮಿತಿ. (Taluk Level Executive Committee)

| ಕ್ರ.ಸಂ | ಅಧ್ಯಕ್ಷರು/ ಸದಸ್ಯರು | ಪದನಾಮ |
|---|---|---|
| 1. | ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತ್. | ಅಧ್ಯಕ್ಷರು |
| 2. | ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು, | ಸದಸ್ಯರು |
| 3. | ಸಹಾಯಕ ನಿರ್ದೇಶಕರು, (ಗ್ರಾಮೀಣಾಭಿವೃದ್ಧಿ) | ಸದಸ್ಯರು |
| 4. | ತಾಲ್ಲೂಕು ಆರೋಗ್ಯ ಅಧಿಕಾರಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, | ಸದಸ್ಯರು |
| 5. | ತಾಲ್ಲೂಕು ಮಟ್ಟದ NRLM ಸಂಯೋಜಕರು. | ಸದಸ್ಯರು. |

| | | |
|---|---|---|
| 6. | ಜಿಲ್ಲಾ ಸಮಿತಿಯಲ್ಲಿ ಮೊಬೈಲ್ ಕ್ರಶ್ ಸಂಸ್ಥೆಯಿಂದ ಆಯ್ಕೆಯಾದ ಸ್ವಯಂ ಸೇವಾ ಸಂಸ್ಥೆಯ ಮುಖ್ಯಸ್ಥರು. | ಸದಸ್ಯರು. |
| 7. | ತಾಲ್ಲೂಕು ಸ್ತ್ರೀ ಶಕ್ತಿ ಒಕ್ಕೂಟ/ ತಾಲ್ಲೂಕು ಪಂಚಾಯತ್ ಫೆಡರೇಷನ್ ಅಧ್ಯಕ್ಷರು. | ಸದಸ್ಯರು. |
| 8. | ಸಹಾಯಕ ನಿರ್ದೇಶಕರು, ಪಂಚಾಯತ್ ರಾಜ್ , ತಾಲ್ಲೂಕು ಪಂಚಾಯತ್ | ಸದಸ್ಯ ಕಾರ್ಯದರ್ಶಿಗಳು |

## ನಿರ್ವಹಿಸಬೇಕಾದ ಜವಾಬ್ದಾರಿಗಳು/ ಕಾರ್ಯಗಳು:-

- **"ಕೂಸಿನ ಮನೆ" ಶಿಶುಪಾಲನಾ ಕೇಂದ್ರ**ಗಳನ್ನು ಪ್ರಾರಂಭಿಸಲು ಅರ್ಹವಿರುವ ಗ್ರಾಮ ಪಂಚಾಯಿತಿಗಳನ್ನು ಗುರುತಿಸುವುದು.
- ಶಿಶುಪಾಲನಾ ಕೇಂದ್ರಗಳ ಕುರಿತು ಸಾರ್ವಜನಿಕರ/ಪೋಷಕರ ಕುಂದುಕೊರತೆ ಪರಿಹಾರವನ್ನು ತಿಳಿಸಲು ಸಲಹಾ ಪೆಟ್ಟಿಗೆಯ ವ್ಯವಸ್ಥೆ ಮಾಡುವುದು..
- ಶಿಶುಪಾಲನಾ ಕೇಂದ್ರಗಳಿಗೆ ನಿಗದಿತ ಸಮಯಕ್ಕೆ ಉತ್ತಮ ಗುಣಮಟ್ಟದ ಆಹಾರ ಸಾಮಗ್ರಿಗಳು, ಹಾಲು, ಮೊಟ್ಟೆ ಸರಬರಾಜು ಆಗುತ್ತಿರುವುದನ್ನು ಖಾತ್ರಿಪಡಿಸಿಕೊಳ್ಳುವುದು. ತಾಲ್ಲೂಕು ಮಟ್ಟದ ಮಾಸ್ಟರ್ ತರಬೇತುದಾರರನ್ನು ಗುರುತಿಸಿ ಜಿಲ್ಲಾ ಸಮಿತಿಗೆ ಕಳುಹಿಸುವುದು.
- ಶಿಶುಪಾಲನಾ ಕೇಂದ್ರಗಳ ಕೇರ್‌ಟೇಕರ್ಸ್‌ಗಳಿಗೆ ಅನುಮೋದಿತ ಪಾಲುದಾರ ತಾಂತ್ರಿಕ ಸಂಸ್ಥೆಯ ಸಹಯೋಗದೊಂದಿಗೆ ಸಾಮರ್ಥ್ಯ ಅಭಿವೃದ್ಧಿಯನ್ನು ಹೆಚ್ಚಿಸುವಂತಹ ತರಬೇತಿಯ ವ್ಯವಸ್ಥೆ ಮಾಡುವುದು.
- **"ಕೂಸಿನ ಮನೆ" ಶಿಶುಪಾಲನಾ ಕೇಂದ್ರಗಳ** ಪ್ರಗತಿ ಪರಿಶೀಲನೆ ಪ್ರತಿ ಮಾಹೆ ಮಾಡುವುದು (ಸಂಬಂಧಿಸಿದ ಇಲಾಖೆಗಳೊಂದಿಗೆ).
- **"ಕೂಸಿನ ಮನೆ" ಶಿಶುಪಾಲನಾ ಕೇಂದ್ರ** – ಗ್ರಾಮ ಪಂಚಾಯಿತಿ ಶಿಶುಪಾಲನಾ ಕೇಂದ್ರದ ಮೇಲ್ವಿಚಾರಣಾ ಸಮಿತಿ (Creche Monitoring Committee)

| ಕ್ರ.ಸಂ | ಅಧ್ಯಕ್ಷರು/ ಸದಸ್ಯರು | ಪದನಾಮ |
|---|---|---|
| 1. | ಗ್ರಾಮ ಪಂಚಾಯಿತಿ ಅಧ್ಯಕ್ಷರು. | ಅಧ್ಯಕ್ಷರು |
| 2. | ಸಂಬಂಧಪಟ್ಟ ವೃತ್ತದ ICDS ಮೇಲ್ವಿಚಾರಕಿ. | ಸದಸ್ಯರು |
| 3. | ಶಿಶುಪಾಲನಾ ಕೇಂದ್ರದ ವ್ಯಾಪ್ತಿಗೆ ಬರುವ ಸರ್ಕಾರಿ ಶಾಲೆಯ ಮುಖ್ಯೋಪಾಧ್ಯಯರು. | ಸದಸ್ಯರು |
| 4. | ಸಂಬಂಧಪಟ್ಟ ಪ್ರಾಥಮಿಕ ಆರೋಗ್ಯ ಸುರಕ್ಷ ಅಧಿಕಾರಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ. | ಸದಸ್ಯರು |

| | | |
|---|---|---|
| 5. | ಶಿಶುಪಾಲನಾ ಕೇಂದ್ರದ ಕೇರ್‌ಟೇಕರ್ಸ್((ರೊಟೇಷನ್ ಮೇಲೆ) | ಸದಸ್ಯರು |
| 6. | ಅಂಗನವಾಡಿ ಕಾರ್ಯಕರ್ತೆ, | ಸದಸ್ಯರು |
| 7. | ಆಶಾ ಕಾರ್ಯಕರ್ತೆ. | ಸದಸ್ಯರು. |
| 8. | ಗ್ರಾಮ ಪಂಚಾಯಿತಿ ಮಟ್ಟದ ಮಹಿಳಾ ಒಕ್ಕೂಟದ ಅಧ್ಯಕ್ಷರು. | ಸದಸ್ಯರು. |
| 9. | ಫಲಾನುಭವಿಗಳ ತಾಯಂದಿರು – 2 (ಒಂದೇ ಕುಟುಂಬಕ್ಕೆ ಸೇರಿದವರು ಆಗಿರಬಾರದು ) | ಸದಸ್ಯರು. |
| 10. | ಫಲಾನುಭವಿಗಳ ತಂದೆಯಂದಿರು – 2 (ಒಂದೇ ಕುಟುಂಬಕ್ಕೆ ಸೇರಿದವರು ಆಗಿರಬಾರದು ) | ಸದಸ್ಯರು. |
| 11. | ಪಂಚಾಯಿತಿ ಅಭಿವೃದ್ಧಿ ಅಧಿಕಾರಿ | ಸದಸ್ಯ ಕಾರ್ಯದರ್ಶಿಗಳು |

**ನಿರ್ವಹಿಸಬೇಕಾದ ಜವಾಬ್ದಾರಿಗಳು/ ಕಾರ್ಯಗಳು:-**

- ಸಮಿತಿಯು "ಕೂಸಿನ ಮನೆ" ಶಿಶುಪಾಲನಾ ಕೇಂದ್ರ ಪ್ರಾರಂಭಿಸಲು ಮತ್ತು ನಿರ್ವಹಿಸಲು ಗ್ರಾಮ ಪಂಚಾಯಿತಿ ಹೊರಡಿಸಿದ ಮಾರ್ಗಸೂಚಿಗಳಂತೆ ನಡೆಯುತ್ತಿರುವ ಬಗ್ಗೆ ಪರಿಶೀಲಿಸಿ ಸೂಕ್ತ ಸಲಹೆ, ಮಾರ್ಗದರ್ಶನ ಮಾಡುವುದು.
- ಎಲ್ಲಾ ಕೇರ್‌ಟೇಕರ್ಸ್‌ಗಳಿಗೆ ತರಬೇತಿ ನೀಡಿದ ಬಗ್ಗೆ ಖಾತ್ರಿ ಪಡಿಸಿಕೊಳ್ಳುವುದು.
- ಸ್ಥಳೀಯ ಆಹಾರ ಪದ್ಧತಿಯನ್ನು ಆಧಾರಿಸಿ ಅಗತ್ಯ ಆಹಾರ ಪಟ್ಟಿ (Menu)ಯ ಬಗ್ಗೆ ಜಿಲ್ಲಾ ಸಮಿತಿಗೆ ಶಿಫಾರಸ್ಸು ಮಾಡುವುದು.
- ಪ್ರತಿ ತಿಂಗಳು ಸಮಿತಿಯು ಸಭೆ ಸೇರಿ ಶಿಶುಪಾಲನಾ ಕೇಂದ್ರ ಕಾರ್ಯವೈಖರಿ ಬಗ್ಗೆ ಚರ್ಚಿಸಿ ಅಗತ್ಯ ಕ್ರಮ ಕೈಗೊಳ್ಳುವುದು.

**"ಕೂಸಿನ ಮನೆ" ಶಿಶುಪಾಲನಾ ಕೇಂದ್ರದ ನಿರ್ವಹಣೆಗಾಗಿ ಅನುದಾನದ ಬಳಕೆಯ ವಿವರ**

"ಕೂಸಿನ ಮನೆ" ಶಿಶುಪಾಲನಾ ಕೇಂದ್ರವನ್ನು ಪ್ರಾರಂಭಿಸಲು ಮತ್ತು ನಿರ್ವಹಣೆಗೆ ಅಗತ್ಯವಿರುವ ಅನುದಾನದ ವಿವರವನ್ನು **ಅನುಬಂಧ-2**ರಲ್ಲಿ ಒದಗಿಸಲಾಗಿದೆ.

- ನರೇಗಾ ಯೋಜನೆಯಲ್ಲಿ ಕ್ರಿಯಾಶೀಲ ಉದ್ಯೋಗ ಕಾರ್ಡ್ ಹೊಂದಿರುವ ಕೇರ್‌ಟೇಕರ್ಸ್‌ಗಳಿಗೆ ನರೇಗಾ ಯೋಜನೆಯಲ್ಲಿ ಸಾಮೂಹಿಕ ಕಾಮಗಾರಿ ಅಡಿಯಲ್ಲಿ(Community work) ನಿಗದಿಪಡಿಸಿದ ಕೂಲಿ ಪಾವತಿಸಬೇಕು. ಸಾಮೂಹಿಕ ಕಾಮಗಾರಿ ನಡೆಯದಿರುವ ಸಂದರ್ಭದಲ್ಲಿ ಮಾತ್ರ

ಕೇರ್‌ಟೇಕರ್ಸ್‌ಗಳಿಗೆ **ಅನುಬಂಧ-2** ರಲ್ಲಿ ಇಲಾಖೆಯಿಂದ ಪಂಚಾಯಿತಿಗೆ ನೀಡಿರುವ ಅನುದಾನದಲ್ಲಿ ನರೇಗಾ ಯೋಜನೆಯ ದಿನಗೂಲಿ ದರದಂತೆ ಕೂಲಿ ಪಾವತಿಸಬೇಕು. ಇದಕ್ಕೆ ಸಂಬಂಧಿಸಿದಂತೆ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು (PDO) **"ನರೇಗಾ ಯೋಜನೆಯಡಿ ಸಾಮೂಹಿಕ ಕಾಮಗಾರಿಗಳು ಈ ಅವಧಿಯಲ್ಲಿ ನಡೆಯುತ್ತಿರುವುದಿಲ್ಲ"** ಎಂಬ ಧೃಡೀಕರಣವನ್ನು ನೀಡಬೇಕು.

**ಗ್ರಾಮ ಪಂಚಾಯಿತಿಗಳು ಲಭ್ಯವಿರುವ ಅನುದಾನದಲ್ಲಿ ಪ್ರತಿ "ಕೂಸಿನ ಮನೆ" ಶಿಶುಪಾಲನಾ ಕೇಂದ್ರಕ್ಕೆ ಈ ಕೆಳಕಂಡ ವೆಚ್ಚವನ್ನು ಭರಿಸುವುದು.**

1. **ಅನಾವರ್ತಕ ವೆಚ್ಚ:**
   A. "ಕೂಸಿನ ಮನೆ" ಶಿಶುಪಾಲನಾ ಕೇಂದ್ರವನ್ನು ಸ್ಥಾಪಿಸಲು ಪ್ರಾರಂಭಿಕ ಒಂದು ಬಾರಿ ವೆಚ್ಚ (One time Expenditure) ರೂ.35,000/-(ಮೂವತ್ತೈದು ಸಾವಿರ ರೂ.ಗಳು ಮಾತ್ರ).
   B. ಮೂಲ ಸೌಕರ್ಯಗಳ ಅಭಿವೃದ್ಧಿಗಾಗಿ ರೂ.30,000/- (ಮೂವತ್ತು ಸಾವಿರ ರೂ.ಗಳು ಮಾತ್ರ).
   (**ಕ್ರಮ ಸಂಖ್ಯೆ:1 ಮತ್ತು 2 ಕ್ಕೆ** ಸಂಬಂಧಿಸಿದಂತೆ ಗ್ರಾಮಮಪಂಚಾಯಿತಿಗಳು ಹೆಚ್ಚಿನ ಅನುದಾನ ಲಭ್ಯವಿದ್ದಲ್ಲಿ ಬಳಸಿಕೊಳ್ಳಬಹುದಾಗಿದೆ. ಯಾವುದೇ ಕಾರಣಕ್ಕೂ ನಮೂದಿಸಿದ ಅನುದಾನಕ್ಕಿಂತ ಕಡಿಮೆ ಭರಿಸುವಂತಿಲ್ಲ).
   C. **"ಕೂಸಿನ ಮನೆ" ಶಿಶುಪಾಲನಾ ಕೇಂದ್ರದ** ಮಕ್ಕಳ ಉಪಯೋಗಕ್ಕಾಗಿ ವರ್ಷಕ್ಕೆ ಒಂದು ಬಾರಿ ಆಟಿಕೆ ಸಾಮಗ್ರಿಗಳ ಖರೀದಿಗೆ ರೂ.5000/-(ಐದು ಸಾವಿರ ರೂ.ಗಳು ಮಾತ್ರ).

2. **ಆವರ್ತಕ ವೆಚ್ಚ:**

1. **ಅನುಬಂಧ -2** ರಲ್ಲಿ ನಮೂದಿಸಿದಂತೆ, ಪೌಷ್ಟಿಕ ಆಹಾರ, ಪ್ರಥಮ ಚಿಕಿತ್ಸೆ ಪೆಟ್ಟಿಗೆ, ಸ್ವಚ್ಛತಾ ಸಾಮಗ್ರಿಗಳು, ಕಲಿಕಾ ಸಾಮಗ್ರಿಗಳು, ಸಮುದಾಯ ಭಾಗವಹಿಸುವಿಕೆ, ಪೋಷಕರ ಸಭೆ, ಉಸ್ತುವಾರಿ ಮತ್ತು ಮೇಲ್ವಿಚಾರಣೆಗಾಗಿ ವರ್ಷಕ್ಕೆ ರೂ.57,680/- (ಐವತ್ತೇಳು ಸಾವಿರದ ಆರು ನೂರ ಎಂಭತ್ತು ಮಾತ್ರ).

**ತಾಲ್ಲೂಕು ಪಂಚಾಯಿತಿ ಭರಿಸಬೇಕಾದ ಅನುದಾನ**

- **"ಕೂಸಿನ ಮನೆ" ಶಿಶುಪಾಲನಾ ಕೇಂದ್ರದ** ಕೇರ್‌ಟೇಕರ್ಸ್‌ಗಳಿಗೆ ಇಲಾಖೆ ಗುರುತಿಸಿದ ಸ್ವಯಂ ಸೇವಾ ಸಂಸ್ಥೆಯ ಸಹಕಾರದಿಂದ ತರಬೇತಿ ಹಾಗೂ ಪುನಃಶ್ಚೇತನ ತರಬೇತಿ ನೀಡಲು ತಾಲ್ಲೂಕು ಪಂಚಾಯಿತಿಗಳು ಅನಿರ್ಬಂಧಿತ ನಿಧಿಯಿಂದ ಪ್ರತಿ ಕೂಸಿನ ಮನೆ ಕೇಂದ್ರಕ್ಕೆ ರೂ.8000/-ದಂತೆ **(ಅನುಬಂಧ-2)** ತರಬೇತಿಗೆ ಅಗತ್ಯವಿರುವ ಪರಿಕರಗಳು, ಲಘು ಉಪಹಾರ, ಪ್ರಯಾಣ ಭತ್ಯೆ ಇತ್ಯಾದಿಗಳಿಗೆ ಬಳಸಿಕೊಳ್ಳುವುದು.

**ಅನುಬಂಧ-2ರಲ್ಲಿ ಲಗತ್ತಿಸಿರುವಂತೆ ಗ್ರಾ.ಅ.ಪಂ.ರಾ ಇಲಾಖೆಯಿಂದ ಪ್ರತಿ "ಕೂಸಿನ ಮನೆ" ಶಿಶುಪಾಲನಾ ಕೇಂದ್ರಕ್ಕೆ ಒದಗಿಸಿದ ರೂ.1 ಲಕ್ಷದಲ್ಲಿ ಈ ಕೆಳಕಂಡ ವೆಚ್ಚವನ್ನು ಭರಿಸುವುದು.**

1. ನರೇಗಾ ಯೋಜನೆಯಡಿ ಸಾಮೂಹಿಕ ಕಾಮಗಾರಿ ನಡೆಯದಿರುವ ಸಂದರ್ಭದಲ್ಲಿ ಮಾತ್ರ ಕೇರ್‌ಟೇಕರ್ಸ್‌ಗಳಿಗೆ **ಅನುಬಂಧ-2** ರಲ್ಲಿ ಇಲಾಖೆಯಿಂದ ಪಂಚಾಯಿತಿಗೆ ನೀಡಿರುವ ಅನುದಾನದಲ್ಲಿ ನರೇಗಾ ಯೋಜನೆಯ ದಿನಗೂಲಿ ದರದಂತೆ ಕೂಲಿ ಪಾವತಿಸಬೇಕು. ಇದಕ್ಕೆ ಸಂಬಂಧಿಸಿದಂತೆ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು (PDO) **ನರೇಗಾ ಯೋಜನೆಯಡಿ ಸಾಮೂಹಿಕ ಕಾಮಗಾರಿಗಳು ಈ ಅವಧಿಯಲ್ಲಿ ನಡೆಯುತ್ತಿರುವುದಿಲ್ಲ** ಎಂಬ ಧೃಡೀಕರಣವನ್ನು ನೀಡಬೇಕು.

2. ಪೌಷ್ಠಿಕ ಆಹಾರಕ್ಕಾಗಿ ವರ್ಷಕ್ಕೆ ರೂ.56,000/-(ಐವತ್ತಾರು ಸಾವಿರ ರೂ.ಗಳು ಮಾತ್ರ).
3. ತರಬೇತಿ ಸ್ಟೇಷನರಿ ಸಾಮಗ್ರಿ, ತರಬೇತಿ ವಿಶ್ಲೇಷಣೆ ನಮೂನೆಗಳು, ಮಕ್ಕಳ ಬೆಳವಣಿಗೆ ಚಾರ್ಟ್‌ಗಳು, ಸಂಪನ್ಮೂಲ ಕಿಟ್, ಪ್ರೊಜೆಕ್ಟರ್ ಹಾಗೂ ಸ್ಪೀಕರ್ಸ್ ಬಳಕೆಗಾಗಿ ಒಂದು ಕೂಸಿನ ಮನೆ ಕೇಂದ್ರಕ್ಕೆ ರೂ.11,136/- (ಹನ್ನೊಂದು ಸಾವಿರದ ಒಂದು ನೂರ ಮುವ್ವತ್ತಾರು ರೂ.ಗಳು ಮಾತ್ರ)

**ಅನುಬಂಧ-2ರಲ್ಲಿ** ನಿಗದಿಪಡಿಸಿದ ಅನುದಾನಕ್ಕೆ ಮಾತ್ರ ಸೀಮಿತಗೊಳಿಸದೆ ಗ್ರಾಮ ಪಂಚಾಯಿತಿಯಲ್ಲಿ ಲಭ್ಯವಿರುವ ಅನುದಾನವನ್ನು ಹಾಗೂ ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿಗಳ 15 ನೇ ಹಣಕಾಸು ಯೋಜನೆಯ ಅನಿರ್ಬಂಧಿತ ಅನುದಾನ ಹಾಗೂ ತಾಲ್ಲೂಕು ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿಗಳ ಅಭಿವೃದ್ಧಿ ಅನುದಾನವನ್ನು ಬಳಸಿಕೊಂಡು ಶಿಶುಪಾಲನಾ ಕೇಂದ್ರವನ್ನು ಉತ್ತಮ ಮಟ್ಟದಲ್ಲಿ ನಡೆಸುವುದು.

## "ಕೂಸಿನ ಮನೆ" ಶಿಶುಪಾಲನಾ ಕೇಂದ್ರದ ಕಟ್ಟಡ

- ಗ್ರಾಮ ಪಂಚಾಯಿತಿ ಉತ್ತಮ ಗುಣಮಟ್ಟದ ಕಟ್ಟಡವನ್ನು ಗುರುತಿಸಬೇಕು.
- ಅಂಗನವಾಡಿ ಕೇಂದ್ರ/ಶಾಲೆಯ ಹತ್ತಿರ ಇರುವ ಕಟ್ಟಡವನ್ನು ಆದ್ಯತೆ ಮೇರೆಗೆ ಗುರುತಿಸಬೇಕು.
- ಮಕ್ಕಳ ಸುರಕ್ಷತೆ ದೃಷ್ಟಿಯಿಂದ **ನೆಲ ಮಹಡಿಯಲ್ಲಿ**ರುವ ಕಟ್ಟಡವನ್ನು ಆಯ್ಕೆ ಮಾಡುವುದು.

- ಕಟ್ಟಡದ ಆವರಣದಲ್ಲಿ ಮಕ್ಕಳ ಸುರಕ್ಷತೆಗೆ ಅಪಾಯ ಉಂಟಾಗುವಂತಹ ತೆರೆದ ಬಾವಿ, ತೆರೆದ ಚರಂಡಿ, ಕಸದ ತೊಟ್ಟಿ, ಆಳವಾದ ಗುಂಡಿ ಇತ್ಯಾದಿಗಳು ಇರಬಾರದು.
- ಉತ್ತಮ ಗಾಳಿ, ಬೆಳಕು ಹಾಗೂ ಸ್ವಚ್ಛತೆ ಹೊಂದಿರಬೇಕು.
- ಕಟ್ಟಡವು ಮಳೆ ಬಂದಾಗ ಸೋರಬಾರದು.
- ಸ್ವಿಚ್ ಬೋರ್ಡ್ ಗಳು ಮಕ್ಕಳ ಕೈಗೆ ಎಟುಕದಂತೆ ಇರಬೇಕು.
- ಕೂಸಿನ ಮನೆ ಕೇಂದ್ರದಲ್ಲಿ ಮಕ್ಕಳಿಗೆ ವಿದ್ಯುತ್‌ನಿಂದ ಅಪಾಯ ಉಂಟಾಗದಂತೆ ರಕ್ಷಿಸಲು Child Proofed Electrical Point ಗಳನ್ನು ಕಡ್ಡಾಯವಾಗಿ ಅಳವಡಿಸುವುದು.
- ಕಟ್ಟಡದಲ್ಲಿ ಚಿಕ್ಕ ಮಕ್ಕಳಿಗಾಗಿ ಮಕ್ಕಳ ಸ್ನೇಹಿ ಶೌಚಾಲಯ ಹಾಗೂ ಸಿಬ್ಬಂದಿಯ ಉಪಯೋಗಕ್ಕಾಗಿ ವಯಸ್ಕರ ಶೌಚಾಲಯಗಳು ಪ್ರತ್ಯೇಕವಾಗಿ

ಇರಬೇಕು. ಒಂದು ವೇಳೆ ಈ ಸೌಲಭ್ಯ ಇಲ್ಲದಿದ್ದಲ್ಲಿ ಗ್ರಾಮ ಪಂಚಾಯಿತಿಯು ನಿರ್ಮಿಸಿ ಸೌಲಭ್ಯ ಒದಗಿಸಬೇಕು.

- ವಿಶೇಷಚೇತನ ಮಕ್ಕಳಿಗಾಗಿ Ramp ಹಾಗೂ Hand rails ಗಳನ್ನು ಅಳವಡಿಸುವುದು.
- ಕಾಂಪೌಂಡ್ ಮತ್ತು ಗೇಟ್ ಸೌಲಭ್ಯ ಇರುವ ಕಟ್ಟಡವನ್ನು ಆದ್ಯತೆ ಮೇರೆಗೆ ಆಯ್ಕೆ ಮಾಡುವುದು.
- ಮಕ್ಕಳ ಆಟ, ಕಲಿಕೆ ಹಾಗೂ ವಿಶ್ರಾಂತಿಗೆ ಅನುಕೂಲವಾಗುವಂತೆ ಕಟ್ಟಡವು ವಿಶಾಲವಾದ ಸ್ಥಳಾವಕಾಶ ಹೊಂದಿರಬೇಕು.
- ಮಕ್ಕಳ ಹೊರಾಂಗಣ ಚಟುವಟಿಕೆಗಳಿಗೆ ಅನುಕೂಲವಾಗುವಂತೆ ಕಟ್ಟಡದ ಮುಂಭಾಗ ಅಥವಾ ಸುತ್ತಲೂ ತೆರೆದ ಮೈದಾನದ ಸೌಲಭ್ಯವಿರಬೇಕು.
- ಹಾಲುಣಿಸುವ ತಾಯಂದಿರಿಗೆ ತಮ್ಮ ಮಗುವಿಗೆ ಹಾಲುಣಿಸಲು ಖಾಸಗಿತನಕ್ಕೆ ಸೂಕ್ತ ವ್ಯವಸ್ಥೆ ಇರುವಂತೆ ಪ್ರತ್ಯೇಕ ವ್ಯವಸ್ಥೆ ಇರಬೇಕು.

## ಪೌಷ್ಠಿಕ ಆಹಾರ ವಿತರಣೆ:

ಮಕ್ಕಳ ಪ್ರಾರಂಭಿಕ ಬಾಲ್ಯದ ಬೆಳವಣಿಗೆಗೆ ಪೌಷ್ಠಿಕ ಆಹಾರವು ಪ್ರಮುಖ ಪಾತ್ರ ವಹಿಸುವುದರಿಂದ ಜಿಲ್ಲಾ ಸಮಿತಿಯು ಪ್ರತಿ ಮಗುವಿಗೆ ರೂ.12/- ರಂತೆ ಸ್ಥಳೀಯ ಆಹಾರದ ಪದ್ಧತಿಗೆ ಅನುಗುಣವಾಗಿ ಆಹಾರದ ಪಟ್ಟಿ (Menu)ಯನ್ನು ಸಿದ್ಧಪಡಿಸಬೇಕು.

ಆಹಾರ ಪಟ್ಟಿ (Menu) ಸಿದ್ಧಪಡಿಸುವಾಗ ಮಕ್ಕಳಿಗೆ ಸಮತೋಲನಾ ಆಹಾರ ಒದಗಿಸಲು ನಿಗದಿಪಡಿಸಿರುವ ಪೌಷ್ಠಕಾಂಶಗಳು ಇರುವುದನ್ನು ಖಚಿತ ಪಡಿಸಿಕೊಳ್ಳುವುದು. ಉದಾ: ಪ್ರೋಟೀನ್, ಕ್ಯಾಲೋರಿ ಇತ್ಯಾದಿ, ಇದಕ್ಕಾಗಿ ಅಗತ್ಯವಿದ್ದಲ್ಲಿ, ತಮ್ಮ ಜಿಲ್ಲೆಯ ಪೌಷ್ಠಿಕ ತಜ್ಞರ ಸಹಾಯ ಪಡೆಯುವುದು.

ಮಕ್ಕಳಿಗೆ ಜಿಲ್ಲಾ ಸಮಿತಿಯು ನೀಡಿದ ಆಹಾರದ ಪಟ್ಟಿ (Menu)ಯ ಪ್ರಕಾರ 3 ಬಾರಿ ಆಹಾರವನ್ನು ತಯಾರಿಸಿ ಕೊಡಬೇಕು. ಬೆಳಿಗ್ಗೆ ಉಪಾಹಾರ, ಮಧ್ಯಾಹ್ನ ಬಿಸಿ ಊಟ ಮತ್ತು ಸಂಜೆ ಲಘು ಉಪಹಾರ ನೀಡಬೇಕು.

ಕೇರ್‌ಟೇಕರ್ಸ್‌ಗಳು ಆಹಾರ ತಯಾರಿಸುವಾಗ, ಸಂಗ್ರಹಣೆ ಮಾಡುವಾಗ/ ಮಕ್ಕಳಿಗೆ ವಿತರಿಸುವಾಗ ಕಡ್ಡಾಯವಾಗಿ ಸ್ವಚ್ಛತೆಯನ್ನು ಪಾಲಿಸತಕ್ಕದ್ದು, ತಟ್ಟೆ, ಲೋಟ ಪಾತ್ರೆಗಳು ಅತ್ಯಂತ ಸ್ವಚ್ಛವಾಗಿ ಇರುವಂತೆ ನೋಡಿಕೊಳ್ಳಬೇಕು.

**ಅನುಬಂಧ-2** ರಲ್ಲಿ ವಿವರಿಸಿದಂತೆ, ಪೌಷ್ಠಿಕ ಆಹಾರಕ್ಕಾಗಿ ಅನುದಾನ ಬಳಸಿಕೊಳ್ಳುವುದು.

## <u>ಕೇರ್ ಟೇಕರ್ಸ್ ಆಯ್ಕೆ:-</u>

- ನರೇಗಾ ಕ್ರಿಯಾಶೀಲ ಉದ್ಯೋಗ ಕಾರ್ಡ್ ಹೊಂದಿರುವ 10 ಮಹಿಳೆಯರನ್ನು ಗುರುತಿಸಿ ಅದರಲ್ಲಿ ಇಬ್ಬರನ್ನು ಕೇರ್ ಟೇಕರ್ಸ್ ಗಳನ್ನು Rotation ಮೇಲೆ ಕೂಸಿನ ಮನೆ ಕೇಂದ್ರಕ್ಕೆ ಆಯ್ಕೆ ಮಾಡಬೇಕು.

- ಕೇರ್ ಟೇಕರ್ಸ್‌ಗಳಿಗೆ ನರೇಗಾ ಯೋಜನೆಯಲ್ಲಿ ಕನಿಷ್ಟ 100 ದಿನಗಳಿಗೆ ನಿಗದಿಪಡಿಸಿದ ಕೂಲಿ ಪಾವತಿಸಬೇಕು, ಗ್ರಾಮ ಪಂಚಾಯಿತಿಗಳಲ್ಲಿ ನರೇಗಾ ಯೋಜನೆಯ ಕಾಮಗಾರಿಗಳು ಇರದಿದ್ದ ಸಮಯದಲ್ಲಿ ಕೇರ್‌ಟೇಕರ್ಸ್‌ಗಳಿಗೆ ಕೂಲಿ ಪಾವತಿಸಲು ಗ್ರಾ.ಅ.ಪಂ.ರಾ. ಇಲಾಖೆಯ ಅನುಮೋದಿತ ಮೊತ್ತವನ್ನು **ಅನುಬಂಧ-2** ರಲ್ಲಿ ನಮೂದಿಸಿರುವಂತೆ ಬಳಸಿಕೊಳ್ಳಬೇಕು.
- ನರೇಗಾ ಕ್ರಿಯಾಶೀಲ ಉದ್ಯೋಗ ಕಾರ್ಡ್ ಹೊಂದಿರುವ 10 ಮಹಿಳೆಯರಿಗೂ ಶಿಶುಪಾಲನಾ ಕೇಂದ್ರ ನಡೆಸುವ ಮತ್ತು ನಿರ್ವಹಿಸುವ ತರಬೇತಿಯನ್ನು ಇಲಾಖೆಯೊಂದಿಗೆ ಒಡಂಬಡಿಕೆ ಮಾಡಿಕೊಳ್ಳಲಾದ **ಮೊಬೈಲ್ ಕ್ರೆಷ್ ಸಂಸ್ಥೆಯ** ಸಹಕಾರದಿಂದ ನೀಡಬೇಕು, ತರಬೇತಿ ಪಡೆದ ನಂತರವೇ ಕೂಸಿನ ಮನೆ ಕೇಂದ್ರದಲ್ಲಿ ಕೆಲಸ ನಿರ್ವಹಿಸಲು ಅವಕಾಶ ನೀಡಬೇಕು.
- ಕೇರ್ ಟೇಕರ್ಸ್‌ನ್ನು ನೇಮಕಾತಿ ಮಾಡುವ ಸಂದರ್ಭದಲ್ಲಿ ಚಿಕ್ಕ ಮಕ್ಕಳನ್ನು ನಿರ್ವಹಿಸುವ ಅವರ ಕೌಶಲ್ಯತೆಯನ್ನು ಪರಿಶೀಲಿಸಿ, ಉತ್ತಮರಾಗಿರುವವರನ್ನು ಆಯ್ಕೆ ಮಾಡುವುದು.
- ಕೇರ್ ಟೇಕರ್ಸ್ ಶಿಶುಗಳ ಮತ್ತು ಮಕ್ಕಳ ಆರೈಕೆ, ಪೋಷಣೆಯ ಅನುಭವ ಹೊಂದಿರುವವರಿಗೆ ಆದ್ಯತೆ ನೀಡುವುದು.
- ಶಿಶುಪಾಲನಾ ಕೇಂದ್ರದಲ್ಲಿ ಅಗತ್ಯ ದಾಖಲಾತಿಗಳನ್ನು ನಿರ್ವಹಿಸಬೇಕಾದ ಕಾರಣ ಕೇರ್ ಟೇಕರ್ಸ್ ವಿದ್ಯಾರ್ಹತೆ ಕನಿಷ್ಟ **SSLC/10ನೇ ತರಗತಿ** ಪಾಸಾಗಿರಬೇಕು.
- ಕೆಲಸ ನಿರ್ವಹಿಸುವ ಕೇರ್ ಟೇಕರ್ಸ್ ವಯೋಮಿತಿಯು 25-45 ವರ್ಷದೊಳಗಿರಬೇಕು.

## "ಕೂಸಿನ ಮನೆ" ಶಿಶುಪಾಲನಾ ಕೇಂದ್ರದ ನಿರ್ವಹಣೆಯಲ್ಲಿ ಗ್ರಾಮ ಪಂಚಾಯಿತಿಯ ಜವಾಬ್ದಾರಿಗಳು.

ಗ್ರಾಮ ಪಂಚಾಯಿತಿಯು ತನ್ನ ವ್ಯಾಪ್ತಿಯಲ್ಲಿ ಬರುವ ನರೇಗಾ ಯೋಜನೆಯಲ್ಲಿ ತೊಡಗಿರುವ ಕ್ರಿಯಾಶೀಲ ಉದ್ಯೋಗ ಕಾರ್ಡ್ ಹೊಂದಿರುವ ಕುಟುಂಬದ ಮಹಿಳೆಯರನ್ನು ಗುರುತಿಸಿ ಆ ಗ್ರಾಮದಲ್ಲಿ **"ಕೂಸಿನ ಮನೆ" ಶಿಶುಪಾಲನಾ ಕೇಂದ್ರ**ಗಳನ್ನು ಪ್ರಾರಂಭಿಸಬೇಕು.

ಶಿಶುಪಾಲನಾ ಕೇಂದ್ರದಲ್ಲಿ ಕ್ರಿಯಾಶೀಲ ಉದ್ಯೋಗ ಕಾರ್ಡ್ ಹೊಂದಿರುವ ಕುಟುಂಬದ 3 ವರ್ಷದ ಒಳಗಿನ ಗರಿಷ್ಠ 25 ಮಕ್ಕಳನ್ನು ಆಯ್ಕೆ ಮಾಡಿಕೊಳ್ಳಬೇಕು.

ನರೇಗಾ ಯೋಜನೆಯಲ್ಲಿ ಮಹಿಳೆಯರು ಪ್ರತಿ ದಿನ ಕನಿಷ್ಠ 4 ರಿಂದ 6 ಗಂಟೆ ಕೆಲಸ ನಿರ್ವಹಿಸುವುದರಿಂದ ಅವರು ನಿರ್ವಹಿಸುವ ಕೆಲಸದ ಅವಧಿಗೆ ಅನುಕೂಲವಾಗುವಂತೆ ಶಿಶುಪಾಲನಾ ಕೇಂದ್ರವು ಕನಿಷ್ಠ 6 ಗಂಟೆ 30 ನಿಮಿಷಗಳ ಅವಧಿಗೆ ಕಾರ್ಯನಿರ್ವಹಿಸುವಂತೆ ಗ್ರಾಮ ಪಂಚಾಯಿತಿಯವರು ಸಮಯವನ್ನು ನಿರ್ಧರಿಸಬೇಕು.

ಶಿಶುಪಾಲನಾ ಕೇಂದ್ರದಲ್ಲಿ ನಿರ್ವಹಿಸಬೇಕಾದ ವೇಳಾ ಪಟ್ಟಿಯ ಮಾದರಿಯನ್ನು **ಅನುಬಂಧ – 3** ರಲ್ಲಿ ಹಾಗೂ ಶಿಶುಪಾಲನಾ ಕೇಂದ್ರದಲ್ಲಿ ಇರಬೇಕಾದ ಪರಿಕರಗಳ ಪಟ್ಟಿಯನ್ನು **ಅನುಬಂಧ – 4** ರಲ್ಲಿ ಒದಗಿಸಲಾಗಿದೆ.

- ಕೇಂದ್ರದ ಸ್ವಚ್ಛತೆಗಾಗಿ ಫಿನೈಲ್, ಸೋಪು, Disinfectants ಇತ್ಯಾದಿಗಳನ್ನು ಸಾಕಷ್ಟು ಪ್ರಮಾಣದಲ್ಲಿ ಒದಗಿಸಬೇಕು.

- ಕೇಂದ್ರದಲ್ಲಿ ಇರುವೆ, ಜಿರಲೆಯಂತಹ ಕ್ರಿಮಿಕೀಟಗಳು ಕಂಡುಬಂದಲ್ಲಿ ಗ್ರಾಮ ಪಂಚಾಯಿತಿಯು ಕೀಟ ನಿಯಂತ್ರಣಕ್ಕೆ ಕ್ರಮಕೈಗೊಳ್ಳಬೇಕು.

- ಚಪ್ಪಲಿಗಳನ್ನು ಕ್ರಮವಾಗಿ ಇಡಲು ಚಪ್ಪಲಿ ಸ್ಟ್ಯಾಂಡ್ (Shoe rack)/ಪ್ರತ್ಯೇಕ ಸ್ಥಳದ ವ್ಯವಸ್ಥೆ ಒದಗಿಸಬೇಕು.

- ಕಸದ ಬುಟ್ಟಿಗಳನ್ನು ಒದಗಿಸುವುದು.

**ಅನುಬಂಧ-5 ರಲ್ಲಿ ಲಗತ್ತಿಸಿರುವ LOGO ವನ್ನು ಕೂಸಿನ ಮನೆ ಕೇಂದ್ರದಲ್ಲಿ ಬಳಸುವುದು.**

**"ಕೂಸಿನ ಮನೆ" ಕೇಂದ್ರದಲ್ಲಿ ನಿರ್ವಹಿಸಬೇಕಾದ ದಾಖಲಾತಿಗಳು.**

1. ಮಕ್ಕಳ ದಾಖಲಾತಿ ವಹಿ-
2. ಹಾಜರಾತಿ ವಹಿ-
3. ಆಹಾರ ವಿತರಣಾ ವಹಿ-
4. ವೈದ್ಯಾಧಿಕಾರಿಗಳ ಆರೋಗ್ಯ ತಪಾಸಣಾ ವಹಿ-
5. ರೋಗ ನಿರೋಧಕ ಲಸಿಕಾ ವಹಿ- (Immunization Register).
6. ಖರ್ಚು-ವೆಚ್ಚಗಳ ವಹಿ-
7. ಸಿಬ್ಬಂದಿ ಹಾಜರಾತಿ ವಹಿ-
8. ಪೀಠೋಪಕರಣ ಹಾಗೂ ಆಟದ ಸಾಮಗ್ರಿಗಳ ದಾಸ್ತಾನು ವಹಿ-
9. ಸಂದರ್ಶಕರ ವಹಿ-
10. ಶಿಶುಪಾಲನಾ ಕೇಂದ್ರದ ಮೇಲ್ವಿಚಾರಣಾ ಸಮಿತಿ ಸಭಾ ನಡವಳಿ ವಹಿ.

**<u>ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ</u> ಇಲಾಖೆಯ <u>ಜವಾಬ್ದಾರಿಗಳು</u>**

**ii. ಶಾಲಾ ಪೂರ್ವ ಶಿಕ್ಷಣ.**

- ಮಕ್ಕಳ ಸಮಗ್ರ ಅಭಿವೃದ್ಧಿಗಾಗಿ ಮಕ್ಕಳ ವಯಸ್ಸಿಗೆ ಅನುಗುಣವಾಗಿ ಚಟುವಟಿಕೆಗಳನ್ನು ನಡೆಸಲು 3 ವರ್ಷದೊಳಗಿನ ಮಕ್ಕಳಿಗೆ ಸೂಕ್ತ ಪಠ್ಯಕ್ರಮವನ್ನು ಒದಗಿಸುವುದು. ಇದು ಶಿಕ್ಷಕಿಗೆ ಮಾರ್ಗದರ್ಶಿ ಪುಸ್ತಕವಾಗಿರಬೇಕು.
- ಪಠ್ಯಕ್ರಮವು ಮಕ್ಕಳಲ್ಲಿ ಇರುವ ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ ಮತ್ತು ಭಾಷೆಯ ವ್ಯತ್ಯಾಸಗಳಿಗೆ ಹೊಂದುವಂತೆ ಇರಬೇಕು.
- ಶಿಶುಪಾಲನಾ ಕೇಂದ್ರದ ಚಟುವಟಿಕೆಗಳಿಗೆ ಪೂರಕವಾಗಿರುವಂತೆ ಪಠ್ಯಕ್ರಮವನ್ನು ಸಿದ್ಧಪಡಿಸಬೇಕು.

**ii. ಮೇಲ್ವಿಚಾರಣೆ:**

- ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು/ಸಹಾಯಕ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು/ಮೇಲ್ವಿಚಾರಕಿಯರು ಗ್ರಾಮದ ಅಂಗನವಾಡಿ ಕೇಂದ್ರಕ್ಕೆ

ಭೇಟಿ ನೀಡಿದಾಗ ಕೂಸಿನ ಮನೆ ಕೇಂದ್ರಕ್ಕೂ ಕಡ್ಡಾಯವಾಗಿ ಭೇಟಿ ನೀಡಿ ಸೂಕ್ತ ಸಲಹೆ ಹಾಗೂ ಮಾರ್ಗದರ್ಶನ ನೀಡುವುದು.

- ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಅಧಿಕಾರಿಗಳು/ಸಿಬ್ಬಂದಿಗಳು ಕೂಸಿನ ಮನೆ ಕೇಂದ್ರಕ್ಕೆ ಭೇಟಿ ನೀಡಿ ಸೂಕ್ತ ಸಲಹೆ ಹಾಗೂ ಮಾರ್ಗದರ್ಶನ ನೀಡುವುದು.

**ಇತರೆ ಜವಾಬ್ದಾರಿಗಳು:**

- "ಕೂಸಿನ ಮನೆ" ಶಿಶುಪಾಲನಾ ಕೇಂದ್ರಗಳಲ್ಲಿ ದಾಖಲಾಗಿರುವ ಮಕ್ಕಳಿಗೆ ಪ್ರಮಾಣಿತ ವೇಳಾ ಪಟ್ಟಿಯಂತೆ ಲಸಿಕಾಕರಣ ಕಾರ್ಯಕ್ರಮವನ್ನು ಅಂಗನವಾಡಿ ಕಾರ್ಯಕರ್ತೆಯರು ತಮ್ಮ ಕಾರ್ಯಕ್ರಮಗಳ ಜೊತೆಗೆ ನಿರ್ವಹಿಸುವುದು.
- ಕೂಸಿನ ಮನೆ" ಶಿಶುಪಾಲನಾ ಕೇಂದ್ರಗಳಿಗೆ ದಾಖಲಾಗುವ ಮಕ್ಕಳ ಬೆಳವಣಿಗೆಯನ್ನು ಪೋಷಣ್ ಟ್ರ್ಯಾಕರ್ ನಲ್ಲಿ ಅಳವಡಿಸುವುದು.
- ಇಲಾಖೆಯ ಕಾರ್ಯಕ್ರಮಗಳಾದ ಪೋಷಣ್ ಮಾಹ್, ಪೋಷಣ್ ಪಕ್ವಾಡ್, ಸ್ತನ್ಯಪಾನ ಸಪ್ತಾಹ, ಆರೋಗ್ಯ ಮತ್ತು ಪೋಷಣೆಯ ಸಪ್ತಾಹ ಇತ್ಯಾದಿಗಳಂತಹ ಸಮುದಾಯ ಆಧಾರಿತ ಕಾರ್ಯಕ್ರಮಗಳಲ್ಲಿ ಕೂಸಿನ ಮನೆ ಕೇಂದ್ರದ ಮಕ್ಕಳು ಭಾಗವಹಿಸುವಂತೆ ಕ್ರಮವಹಿಸುವುದು.
- "ಕೂಸಿನ ಮನೆ" ಶಿಶುಪಾಲನಾ ಕೇಂದ್ರಗಳಿಗೆ ದಾಖಲಾಗುವ ಮಕ್ಕಳ ಆರೋಗ್ಯ ತಪಾಸಣೆಗಾಗಿ, ಪೌಷ್ಠಿಕ ಪುನರ್ವಸತಿ ಕೇಂದ್ರ(ಎನ್.ಆರ್.ಸಿ), ರಾಷ್ಟ್ರೀಯ ಬಾಲ ಸ್ವಾಸ್ಥ್ಯ ಕಾರ್ಯಕ್ರ,ಮ, ಪ್ರಾಥಮಿಕ ಆರೋಗ್ಯ ಕೇಂದ್ರಗಳೊಂದಿಗೆ ಸಮನ್ವಯ ಸಾಧಿಸಿ, ಕಾರ್ಯನಿರ್ವಹಿಸುವುದು.
- ಗರ್ಭಿಣಿ, ಬಾಣಂತಿಯರಿಗೆ ಹಾಗೂ ಮಕ್ಕಳನ್ನು ಕೇಂದ್ರ/ರಾಜ್ಯ ಸರ್ಕಾರದ ಕಾರ್ಯಕ್ರಮಗಳಾದ ಪ್ರಧಾನ ಮಂತ್ರಿ ಮಾತೃ ವಂದನಾ ಯೋಜನೆ, ಜನನಿ ಸುರಕ್ಷಾ ಯೋಜನೆಗಳಲ್ಲಿ ಫಲಾನುಭವಿಗಳನ್ನು ನೋಂದಾಯಿಸಲು ಕೂಸಿನ ಮನೆ ಕೇಂದ್ರದ ಕೇರ್ ಟೇಕರ್ಸ್ ಗಳಿಗೆ ಅಂಗನವಾಡಿ ಕಾರ್ಯಕರ್ತೆಯರು ಬೆಂಬಲ ನೀಡುವುದು.

(ಉಮಾ ಮಹಾದೇವನ್)
ಸರ್ಕಾರದ ಅಪರ ಮುಖ್ಯ
ಕಾರ್ಯದರ್ಶಿ(ಪಂ.ರಾಜ್), ಗ್ರಾಮೀಣಾಭಿವೃದ್ಧಿ
ಮತ್ತು ಪಂಚಾಯತ್ ರಾಜ್ ಇಲಾಖೆ, ಬೆಂಗಳೂರು.

(ಡಾ. ಜಿ ಸಿ ಪ್ರಕಾಶ್)
ಸರ್ಕಾರದ ಕಾರ್ಯದರ್ಶಿಗಳು,
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಮತ್ತು ಹಿರಿಯ ನಾಗರೀಕರ
ಸಬಲೀಕರಣ ಇಲಾಖೆ,
ಬೆಂಗಳೂರು.

**ಪ್ರತಿಯನ್ನು ಅಗತ್ಯ ಕ್ರಮಕ್ಕಾಗಿ:**

1. ಆಯುಕ್ತರು, ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ , ಬೆಂಗಳೂರು.
2. ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು.
3. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ.

4. ರಾಜ್ಯದ ಎಲ್ಲಾ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ (ಸಂಬಂಧಿಸಿದ ಜಿಲ್ಲಾ ಪಂಚಾಯಿತಿ ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳ ಮುಖಾಂತರ)
5. ಸಂಬಂಧಿಸಿದ ಗ್ರಾಮ ಪಂಚಾಯಿತಿ, ಪಂಚಾಯಿತಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಗೆ. (ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗಳ ಮುಖಾಂತರ)

**<u>ಪ್ರತಿಯನ್ನು ಮಾಹಿತಿಗಾಗಿ:</u>**

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು(ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬೆಂಗಳೂರು ಇವರ ಆಪ್ತ ಸಹಾಯಕರಿಗೆ.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬೆಂಗಳೂರು ಇವರ ಆಪ್ತ ಸಹಾಯಕರಿಗೆ.
3. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಬೆಂಗಳೂರು ಇವರ ಆಪ್ತ ಸಹಾಯಕರಿಗೆ.
4. ಅಭಿಯಾನ ನಿರ್ದೇಶಕರು, ರಾಷ್ಟ್ರೀಯ ಆರೋಗ್ಯ ಅಭಿಯಾನ (NHM) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ.
5. ಆಯುಕ್ತರು, ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ, ಬೆಂಗಳೂರು ಇವರ ಆಪ್ತ ಸಹಾಯಕರು.
6. ನಿರ್ದೇಶಕರು(ಅಭಿವೃದ್ಧಿ), ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ, ಇವರ ಆಪ್ತ ಶಾಖೆಗೆ
7. ಕಛೇರಿ ಪ್ರತಿ.

## ಅನುಬಂಧ - 1

## "ಕೂಸಿನ ಮನೆ" ಶಿಶುಪಾಲನಾ ಕೇಂದ್ರಗಳನ್ನು ಪ್ರಾರಂಭಿಸಲು ಹಾಗೂ ನಿರ್ವಹಿಸಲು ಅನುಸರಿಸಬೇಕಾದ ಮಾರ್ಗಸೂಚಿಗಳು.

### 1. "ಕೂಸಿನ ಮನೆ" ಶಿಶುಪಾಲನಾ ಕೇಂದ್ರದಲ್ಲಿ ಒದಗಿಸಬೇಕಾದ ಸೌಲಭ್ಯಗಳು:-

### A. ಅಡುಗೆ ಕೋಣೆ

- ಕಟ್ಟಡದಲ್ಲಿ ಪ್ರತ್ಯೇಕ ಅಡುಗೆ ಕೋಣೆ ವ್ಯವಸ್ಥೆ ಇರಬೇಕು.
- ಒಂದು ವೇಳೆ ಕಟ್ಟಡದಲ್ಲಿ ಒಂದೇ ಕೋಣೆಯಿದ್ದಲ್ಲಿ, ಅಲ್ಲಿಯೇ Partition/Barrier ವ್ಯವಸ್ಥೆ ಮಾಡಬೇಕು.
- ಅಡುಗೆ ಕಟ್ಟೆ, ಗ್ಯಾಸ್ ಸ್ಟವ್, ಕುಕ್ಕರ್ ಸೌಲಭ್ಯ ಇರಬೇಕು.
- ಅಡುಗೆ ಕೋಣೆಯಲ್ಲಿ ಶೆಲ್ಫ್‌ಗಳ (Shelves) ವ್ಯವಸ್ಥೆ ಇರಬೇಕು.
- ಮಕ್ಕಳಿಗೆ ಬಿಸಿ ಆಹಾರವನ್ನು ತಯಾರಿಸಲು, ಹಾಲನ್ನು ಕಾಯಿಸಲು ಸೂಕ್ತ ಅಡುಗೆ ಪಾತ್ರೆ ಹಾಗೂ ಇತರೆ ಸಾಮಾಗ್ರಿಗಳು ಲಭ್ಯವಿರಬೇಕು.
- ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಇರಬೇಕು.
- ಪಾತ್ರೆಗಳನ್ನು ತೊಳೆಯಲು ನೀರಿನ ಸೌಲಭ್ಯವಿರುವ ಚಿಕ್ಕದಾದ ಬಚ್ಚಲು ವ್ಯವಸ್ಥೆ ಇರಬೇಕು.

### 2. ಕಲಿಕಾ ಕೊಠಡಿ.

- ಗೋಡೆಯ ಮೇಲೆ ಮಕ್ಕಳಿಗೆ ಉಪಯುಕ್ತವಾಗುವ ಆಕರ್ಷಣೀಯ ಚಿತ್ರಗಳನ್ನು ಬರೆಸುವುದು.
- ಮಕ್ಕಳಿಗೆ ಆಕರ್ಷಕವಾಗಿರುವ ಆಟದ ಮತ್ತು ಬೋಧನ ಕಲಿಕಾ ಸಾಮಗ್ರಿಗಳನ್ನು ಪ್ರದರ್ಶಿಸಬೇಕು.
- ದೈನಂದಿನ ವೇಳಾಪಟ್ಟಿಯನ್ನು ಗೋಡೆಯ ಮೇಲೆ ಪ್ರದರ್ಶಿಸಬೇಕು.
- ಕೇಂದ್ರದಲ್ಲಿ ಮಕ್ಕಳ ಸ್ನೇಹಿ ವಾತಾವರಣ ನಿರ್ಮಿಸಲು ಮಕ್ಕಳು ಬಿಡಿಸಿದ ಚಿತ್ರಗಳು ಹಾಗೂ ಇತರೆ ಕಲೆಗಳನ್ನು ಪ್ರದರ್ಶಿಸಬೇಕು.
- ಮಕ್ಕಳಿಗೆ ಅಗತ್ಯವಿರುವ ತೊಟ್ಟಿಲು, ಹಾಸಿಗೆ, ಹೊದಿಕೆಗಳು ಮತ್ತು ತೊಳೆಯಬಹುದಾದ ಚಾಪೆಗಳು (ಮ್ಯಾಟ್) ಇರಬೇಕು.
- ಕೇಂದ್ರದಲ್ಲಿ ತೀಕ್ಷ್ಣವಾದ/ ಚೂಪಾದ ಅಂಚುಗಳಿಲ್ಲದ ಪೀಠೋಪಕರಣಗಳಾದ ಕುರ್ಚಿ, ಟೇಬಲ್ ಗಳ ವ್ಯವಸ್ಥೆ ಮಾಡಬೇಕು ಮತ್ತು ಅವುಗಳು ಮಕ್ಕಳ ಎತ್ತರಕ್ಕೆ ತಕ್ಕಂತೆ ಇರಬೇಕು.
- "ಕೂಸಿನ ಮನೆ" ಶಿಶು ಪಾಲನಾ ಕೇಂದ್ರವು ಅವಶ್ಯಕತೆ ಇರುವಷ್ಟು ಫ್ಯಾನ್‌ಗಳ ವ್ಯವಸ್ಥೆ ಹೊಂದಿರಬೇಕು.

3. **ಮಕ್ಕಳ ಆಟಿಕೆ / ಕಲಿಕಾ ಸಾಮಗ್ರಿಗಳು:-**

- ಮಕ್ಕಳ ವಯಸ್ಸಿಗೆ ಸೂಕ್ತವಾಗಿರುವಂತಹ ಮಕ್ಕಳ ಸ್ನೇಹಿ ಆಟಿಕೆಗಳು ಇರಬೇಕು.
- ಮಕ್ಕಳಿಗೆ ಹಾನಿಮಾಡದಂತಹ, ವಿಷಕಾರಿಯಲ್ಲದ (Non-toxic)/ಚೂಪಾದ ಅಂಚುಗಳು ಇಲ್ಲದಿರುವ ಗೊಂಬೆ ಮತ್ತು ಆಟಿಕೆ ಇರಬೇಕು.
- ಸ್ಥಳೀಯವಾಗಿ ತಯಾರಿಸಲಾದ ಚನ್ನಪಟ್ಟಣ ಮತ್ತು ಕಿನ್ನಾಳ ಗೊಂಬೆಗಳಿಗೆ ಆದ್ಯತೆ ನೀಡಬಹುದಾಗಿದೆ.
- ಧೂಳು ಹಿಡಿಯುವಂತಹ/ಆಕರ್ಷಿಸುವಂತಹ ಆಟಿಕೆಗಳು ಇರಬಾರದು.

4. **ಮಕ್ಕಳ ವೈಯಕ್ತಿಕ ಸ್ವಚ್ಛತೆ.**

- ಮಕ್ಕಳಲ್ಲಿ ಉತ್ತಮ ಅಭ್ಯಾಸಗಳಾದ ಕೈಗಳನ್ನು ತೊಳೆಯುವುದು, ಮೂಗು ಒರೆಸಿಕೊಳ್ಳುವುದು, ಬಟ್ಟೆ ಬದಲಾಯಿಸುವುದು ಇತ್ಯಾದಿ ಚಟುವಟಿಕೆಗಳನ್ನು ಪ್ರೋತ್ಸಾಹಿಸುವುದು.
- ಅಗತ್ಯವಿದ್ದಲ್ಲಿ ಮಗುವಿನ ಬಟ್ಟೆಯನ್ನು ಬದಲಿಸಬೇಕು.
- ಮಕ್ಕಳ ಉಗುರನ್ನು ಪ್ರತಿವಾರ ಪರಿಶೀಲಿಸಿ ಅಗತ್ಯವಿದ್ದಲ್ಲಿ ತೆಗೆಯಬೇಕು.

5. **"ಕೂಸಿನ ಮನೆ" ಶಿಶುಪಾಲನಾ ಕೇಂದ್ರದಲ್ಲಿ ಮಕ್ಕಳ ಸುರಕ್ಷತೆ ಮತ್ತು ರಕ್ಷಣೆ.**

- ಗ್ರಾಮ ಪಂಚಾಯಿತಿಯು ನಿಗದಿಪಡಿಸಿದ ವೇಳೆಯಂತೆ ಕೂಸಿನ ಮನೆ ಕೇಂದ್ರವು ಕಡ್ಡಾಯವಾಗಿ ಕಾರ್ಯನಿರ್ವಹಿಸಬೇಕು.
- ಕೇಂದ್ರದಲ್ಲಿ ಮಕ್ಕಳ ಸುರಕ್ಷತೆಗೆ ಮತ್ತು ನಿರ್ಭೀತ ವಾತಾವರಣ ನಿರ್ಮಿಸಲು ವಿಶೇಷ ಕಾಳಜಿ ವಹಿಸಬೇಕು.
- ಮಕ್ಕಳ ಸಂಪೂರ್ಣ ಮಾಹಿತಿಯನ್ನು ನಿರ್ವಹಿಸಬೇಕು. ಉದಾ: ಮಗುವಿನ ಗುರುತು, ಮನೆ ವಿಳಾಸ, ಪೋಷಕರ ವಿವರ ಇತ್ಯಾದಿ.
- ಮಕ್ಕಳ ಸಾಮಾನ್ಯ ಆರೋಗ್ಯ ಸ್ಥಿತಿ ಹಾಗೂ ದೈನಂದಿನ ಆರೋಗ್ಯದ ಕುರಿತು ಪೋಷಕರಿಂದ ಮಾಹಿತಿ ಪಡೆಯುವುದು (ಪೋಷಕರು –ಮಗುವಿನ ಆರೈಕೆ ಮಾಡುವ 18 ವರ್ಷ ಮೇಲ್ಪಟ್ಟ ಕುಟುಂಬದ ಸದಸ್ಯರು).
- ಮಗುವನ್ನು ಕೇಂದ್ರಕ್ಕೆ ಕರೆದುಕೊಂಡು ಬರುವ/ಹೋಗುವ ಆ ಕುಟುಂಬದ ವ್ಯಕ್ತಿಯ ಮಾಹಿತಿಯು ಕೇರ್ ಟೇಕರ್ಸ್ ಗಳಿಗೆ ತಿಳಿದಿರಬೇಕು
- ಕೂಸಿನ ಮನೆ ಕೇಂದ್ರದ ಮಕ್ಕಳ ಹಾಜರಾತಿಯನ್ನು ಪ್ರತಿದಿನ ಬೆಳಗ್ಗೆ ಮತ್ತು ಸಂಜೆ ಎರಡು ಬಾರಿ ನಮೂದಿಸಬೇಕು.
- ಚೂಪಾದ ವಸುಗಳಾದ ಕತ್ತರಿ, ಚಾಕು, ಪಿನ್ ಇತ್ಯಾದಿ ಹಾಗೂ ಡಿಟರ್ಜೆಂಟ್, ಫಿನೈಲ್, ಕ್ಲೀನಿಂಗ್ ಏಜೆಂಟ್‌ಗಳಂತಹ ರಾಸಾಯನಿಕ ಸಾಮಗ್ರಿಗಳನ್ನು ಮಕ್ಕಳಿಗೆ ಸಿಗದಂತೆ ಇಡಬೇಕು.
- ಕೂಸಿನ ಮನೆ ಕೇಂದ್ರದ ಹತ್ತಿರ ಅಥವಾ ಒಳಗೆ ತೆರೆದ ವೈರಿಂಗ್/ತೆರೆದ ವಿದ್ಯುತ್ ಸ್ವಿಚ್ ಬೋರ್ಡ್ ಇರಬಾರದು.
- ಯಾವುದೇ ಸಂದರ್ಭದಲ್ಲಿ ವಿಶ್ರಾಂತಿ ಸಮಯದಲ್ಲಿಯೂ ಸಹ ಮಗುವನ್ನು ಒಂಟಿಯಾಗಿ ಬಿಡಬಾರದು.
- ಕೇಂದ್ರದ ಒಳಗಡೆ ಮಕ್ಕಳು ಚಪ್ಪಲಿಗಳನ್ನು ಧರಿಸದಂತೆ ನೋಡಿಕೊಳ್ಳಬೇಕು.

- ಮಗುವಿಗೆ ಯಾವುದೇ ರೀತಿಯ ಕೆಟ್ಟ ಅಶ್ಲೀಲ ಬೈಗಳು, ದೈಹಿಕ ದಂಡನೆ ಮಾಡಕೂಡದು.
- ಕೇಂದ್ರ ನಡೆಯುವ ವೇಳೆಯಲ್ಲಿ ಪರಿಚಿತ ಅಥವಾ ಅಪರಿಚಿತ ವ್ಯಕ್ತಿಗಳನ್ನು ಕೇಂದ್ರದಲ್ಲಿ ಸೇರಿಸಬಾರದು.
- ಕೇಂದ್ರ ನಡೆಯುವ ವೇಳೆಯಲ್ಲಿ ಯಾವುದೇ ಕಾಮಗಾರಿಗಳು ಉದಾ:ಕಟ್ಟಡದ ದುರಸ್ತಿ, ನಲ್ಲಿ ರಿಪೇರಿ ಇತ್ಯಾದಿಗಳಿಗೆ ಅವಕಾಶ ನೀಡಬಾರದು. ಇವುಗಳನ್ನು ರಜೆಯ ದಿನ ಮಾಡಿಸಬೇಕು.

# ಅನುಬಂಧ -2

| 'ಕೂಸಿನಮನೆ' ಶಿಶುಪಾಲನಾ ಕೇಂದ್ರಗಳಿಗೆ ಭರಿಸಬೇಕಾದ ಅನುದಾನದ ವಿವರ | | | | | | | | | | |
|---|---|---|---|---|---|---|---|---|---|---|
| ಕ್ರ. ಸಂ | ವಿವರ | ಘಟಕ | ವೆಚ್ಚ | ತಿಂಗಳ ವೆಚ್ಚ | ವಾರ್ಷಿಕ ವೆಚ್ಚ | ಮಹಾತ್ಮಗಾಂಧಿ ನರೇಗಾ ಯೋಜನೆ | ಗ್ರಾಮ ಪಂಚಾಯಿತಿ ನಿಧಿ | ಗ್ರಾ.ಅ.ಪಂ.ರಾ ಅನುಮೋದಿತ ಮೊತ್ತ | ತಾ. ಪಂ. ಅನಿರ್ಭಂಧಿತ ನಿಧಿ | ಷರಾ |
| 1 | ಶಿಶುಪಾಲನ ಕೇಂದ್ರದ ಕೇರ್ ಟೇಕರ್ಸ್ | 2 | ರೂ. 316*26 ದಿನಗಳು *2 ಕೇರ್ ಟೇಕರ್ಸ್ | 16432 | 197184 | 1,64,320 | | 32864** | | MGNREGA ಹಾಗೂ RDPR ಅನುಮೋದಿತ ಮೊತ್ತದಿಂದ ಭರಿಸುವುದು |
| 2 | ಪೌಷ್ಟಿಕ ಆಹಾರ (ರೂ. 12 ಪ್ರತಿ ಮಗುವಿಗೆ/ಪ್ರತಿ ದಿನಕ್ಕೆ/ 26 ದಿನಗಳು) | 12 | ರೂ 12*25 ಮಕ್ಕಳು 26 ದಿನಗಳು | 7800 | 93600 | | 37600 | 56,000 | | ಸಮಗ್ರ ಶಿಶು ಅಭಿವೃದ್ಧಿ ಯೋಜನೆ ಮಾರ್ಗಸೂಚಿಯಂತೆ |
| 3 | ವೈದ್ಯಾಧಿಕಾರಿಗಳ ಭೇಟಿ | - | - | | | | | | | ಮ.ಮ.ಅ.ಇ ಹಾಗೂ ಆರೋಗ್ಯ ಇಲಾಖೆಗಳ ನಿಯಮಿತ ಕಾರ್ಯಕ್ರಮಗಳ ಮೂಲಕ |
| 4 | ಪ್ರಥಮ ಚಿಕಿತ್ಸೆ ಪೆಟ್ಟಿಗೆ | 1 | ವರ್ಷಕ್ಕೆ ಒಂದು ಬಾರಿ | | 1000 | | 1,000 | | | ಆರೋಗ್ಯ ಇಲಾಖೆಯಿಂದ ದೃಢೀಕರಿಸಲ್ಪಟ್ಟಂತೆ ಗ್ರಾಮ ಪಂಚಾಯಿತಿ ಮೂಲಕ. |
| 5 | ಸ್ವಚ್ಛತಾ ಸಾಮಗ್ರಿಗಳು ತಿಂಗಳಿಗೆ ರೂ.500 ರಂತೆ | 12 | ರೂ.500* 12 ತಿಂಗಳು | 500 | 6000 | | 6,000 | | | ಗ್ರಾ.ಪಂ ನಿಧಿ |
| 6 | ಕಲಿಕಾ ಸಾಮಗ್ರಿಗಳು ತಿಂಗಳಿಗೆ ರೂ.500 ರಂತೆ | 12 | ರೂ.500* 12 ತಿಂಗಳು | 500 | 6000 | | 6,000 | | | ಗ್ರಾ.ಪಂ ನಿಧಿ |
| 7 | ಸಮುದಾಯ ಭಾಗವಹಿಸುವಿಕೆ | 2 | ರೂ.1500 * 2 (ವರ್ಷಕ್ಕೆ 2 ಬಾರಿ) | 1500 | 3000 | | 3,000 | | | ಗ್ರಾ.ಪಂ ನಿಧಿ |
| 8 | ಪೋಷಕರ ಸಭೆ ಪ್ರತಿ ತಿಂಗಳು | 12 | ರೂ.200*12 | 200 | 2400 | | 2,400 | | | ಗ್ರಾ.ಪಂ ನಿಧಿ |
| 9 | ಉಸ್ತುವಾರಿ ಮತ್ತು ಮೇಲ್ವಿಚಾರಣೆ ಪ್ರತಿ ತಿಂಗಳು | 12 | ರೂ.140*12 | 140 | 1680 | | 1,680 | | | ಗ್ರಾ.ಪಂ ನಿಧಿ |
| | ಒಟ್ಟು ಆವರ್ತಕ ವೆಚ್ಚ | | | 27072 | 310864 | 164320 | 57680 | 88864 | 0 | |
| 10 | ಆಟಿಕೆ ಸಾಮಗ್ರಿಗಳು (ಒಂದು ಬಾರಿ) | | | | 5000 | | 5000 | | | ಗ್ರಾ.ಪಂ ನಿಧಿ |
| 11 | ಸೇವಾಪೂರ್ವ ತರಬೇತಿ ರೂ 100*8 ಸದಸ್ಯರು*8 ದಿನ | 8 | | 6400 | 6400 | | | | 6400 | ತರಬೇತಿಯನ್ನು ನುರಿತ ಸ್ವಯಂ ಸೇವಾಸಂಸ್ಥೆಯಿಂದ ನೀಡುವುದು ತಾಲ್ಲೂಕು ಪಂಚಾಯಿತಿಯ ಅನಿರ್ಭಂದಿತ ನಿಧಿಯಿಂದ ಅನುದಾನ ಭರಿಸುವುದು. |
| 12 | ಪುನಃಶ್ಚೇತನ ತರಬೇತಿ 2 ಕೇರ್ ಟೇಕರ್ಸ್*ರೂ 100* 8 ದಿನ | | | 1600 | 1600 | | | | 1600 | ತರಬೇತಿ ನುರಿತ ಸ್ವಯಂ ಸೇವಾಸಂಸ್ಥೆ,ಅನುದಾನ ತಾ.ಪಂ.ಅನಿರ್ಭಂಧಿತ ನಿಧಿ |
| 13 | ಒಂದು ಬಾರಿ ಕೇಂದ್ರ ಸ್ಥಾಪಿಸುವ ವೆಚ್ಚ | | | | 35000 | | 35000*** | | | ಗ್ರಾ.ಪಂ ನಿಧಿ |

| | | | | | | | | | | |
|---|---|---|---|---|---|---|---|---|---|---|
| 14 | ಮೂಲಸೌಕರ್ಯಗಳ ಅಭಿವೃದ್ಧಿ. | | | | 30000 | | 30000*** | | | ಪೈಂಟಿಂಗ್,ಆವರಣದ ಸ್ವಚ್ಛತೆ ಮತ್ತು ಯಾವುದೇ ಮೂಲಸೌಕರ್ಯದ ಅಭಿವೃದ್ಧಿಗೆ-ಗ್ರಾ.ಪಂ.ನಿಧಿ |
| 15 | ಇತರೆ (ತರಬೇತಿ ಸ್ಟೇಷನರಿ ಸಾಮಗ್ರಿ, ತರಬೇತಿಪೂರ್ವ ಮತ್ತು ನಂತರದ ವಿಶ್ಲೇಷಣೆ ನಮೂನೆಗಳು,ಮಕ್ಕಳ ಬೆಳವಣಿಗೆ ಚಾರ್ಟ್‌ಗಳು, ಸಂಪನ್ಮೂಲ ಕಿಟ್, ಪ್ರೊಜೆಕ್ಟರ್, ಸ್ಪೀಕರ್ಸ್) | | | | 11136 | | | 11136 | | RDPR ನ ಅನುಮೋದಿತ ಮೊತ್ತ |
| | ಒಟ್ಟು ಅನವರ್ತಕ ವೆಚ್ಚ | | | | 89136 | 0 | 70,000 | 11136 | 8000 | |
| | ಒಂದು ಶಿ.ಪಾ.ಕೇಂದ್ರಕ್ಕೆ ತಗಲುವ ವೆಚ್ಚ | | | | 400000 | 164320 | 127680 | 100000 | 8000 | |
| | ಒಟ್ಟು 4000 ಶಿ.ಪಾ.ಕೇಂದ್ರಗಳಿಗೆ ತಗಲುವ ವೆಚ್ಚ | | | | **1600000000** | **657280000** | **510720000** | **400000000** | **32000000** | |
| ಟಿಪ್ಪಣಿ: | 1. ಇಲಾಖೆಯಿಂದ ಒದಗಿಸಲಾದ ಅನುದಾನ / ಸಾಮಗ್ರಿಗಳಿಗಿಂತ ಹೆಚ್ಚಿನ ಅಗತ್ಯವಿದ್ದಲ್ಲಿ, ಗ್ರಾಮಪಂಚಾಯಿತಿಗಳು ಸ್ವಂತ ಸಂಪನ್ಮೂಲದಿಂದ ಭರಿಸಬಹುದಾಗಿದೆ.<br>2. ** ಅನುದಾನ ಉಳಿತಾಯವಾದಲ್ಲಿ, ಕೇಂದ್ರದ ಇತರೆ ಅವಶ್ಯಕತೆಗಳಿಗಾಗಿ ಬಳಸಬಹುದಾಗಿದೆ.<br>3. ***ಕೇಂದ್ರ ಸ್ಥಾಪಿಸುವ ವೆಚ್ಚ (One time expenditure) ಹಾಗೂ ಮೂಲಸೌಕರ್ಯ ಅಭಿವೃದ್ಧಿಗಾಗಿ ಹೆಚ್ಚಿನ ಅನುದಾನ ಲಭ್ಯವಿದ್ದಲ್ಲಿ, ಬಳಸಿಕೊಳ್ಳಬಹುದಾಗಿದೆ. ಯಾವುದೇ ಕಾರಣಕ್ಕೂ ನಮೂದಿಸಿದ ಅನುದಾನಕ್ಕಿಂತ ಕಡಿಮೆ ಭರಿಸುವಂತಿಲ್ಲ. | | | | | | | | | |

**ಅನುಬಂಧ-3**

**"ಕೂಸಿನ ಮನೆ ಕೇಂದ್ರದ ಮಾದರಿ ವೇಳಾ ಪಟ್ಟಿ"**

| **ಕ್ರ.ಸಂ** | **ಸಮಯ** | **ದೈನಂದಿನ ಚಟುವಟಿಕೆ** |
|---|---|---|
| 1 | ಬೆಳಗ್ಗೆ: 9 ರಿಂದ 10 | ಕೇಂದ್ರವನ್ನು ಸ್ವಚ್ಛಗೊಳಿಸಿ ಅವಶ್ಯಕತೆಗೆ ಅನುಸಾರವಾಗಿ ವ್ಯವಸ್ಥೆಯನ್ನು ಮಾಡಿಕೊಳ್ಳುವುದು, ಪ್ರೀತಿಯಿಂದ ಮಕ್ಕಳನ್ನು ಪಾಲಕರಿಂದ ಪಡೆದುಕೊಂಡು. ಬೆಳಗಿನ ಉಪಹಾರವನ್ನು ವಿತರಿಸುವುದು. |
| 2 | ಬೆಳಗ್ಗೆ :10 ರಿಂದ 10.30 | ಮಾನಸಿಕ ವಿಕಾಸ – ಸ್ವತಂತ್ರ ಆಟ ಆಡಿಸುವುದು. |
| 3 | ಬೆಳಗ್ಗೆ:10.30 ರಿಂದ 11.00 | ಅಲ್ಪ ವಿರಾಮ |
| 4 | ಬೆಳಗ್ಗೆ:11.00 ರಿಂದ 11.30 | ಭಾಷಾ ವಿಕಾಸಕ್ಕೆ ಸಂಬಂಧಿಸಿದಂತೆ ಚಟುವಟಿಕೆಗಳನ್ನು ಮಾಡಿಸುವುದು. (ಉದಾ: ಹಾಡು, ಕಥೆ ಇತ್ಯಾದಿ) |
| 5 | ಬೆಳಗ್ಗೆ:11.30 ರಿಂದ 12.00 | ಶಾರೀರಿಕ ವಿಕಾಸಕ್ಕೆ ಸಂಬಂಧಿಸಿದಂತೆ ಚಟುವಟಿಕೆ (ಒಳಾಂಗಣ ಮತ್ತು ಹೊರಾಂಗಣ ಆಟ ಆಡಿಸುವುದು) |
| 6 | ಮಧ್ಯಾಹ್ನ:12.00 ರಿಂದ 1.00 | ಮಕ್ಕಳಿಗೆ ಊಟ ಮಾಡಿಸುವುದು. ಊಟದ ನಂತರ ದೊಡ್ಡ ಮತ್ತು ಚಿಕ್ಕ ಮಕ್ಕಳಿಗೆ ಪ್ರತ್ಯೇಕ ಮಲಗುವ ವ್ಯವಸ್ಥೆ ಮಾಡುವುದು. |
| 7 | ಮಧ್ಯಾಹ್ನ:1.00 ರಿಂದ 2.00 | ಮಕ್ಕಳನ್ನು ಮಲಗಿಸುವುದು. |
| 8 | ಮಧ್ಯಾಹ್ನ:2.00 ರಿಂದ 2.45 | ಮಾನಸಿಕ ವಿಕಾಸಕ್ಕೆ ಸಂಬಂಧಿಸಿದ ಚಟುವಟಿಕೆಗಳು (ಉದಾ: ಬಣ್ಣ, ಆಕಾರ, ಗಾತ್ರ ಗುರುತಿಸುವಿಕೆ, ಮಣಿ ಪೋಣಿಸುವುದು, ಬ್ಲಾಕ್ ಗಳನ್ನು ಹೊಂದಿಸುವುದು ಇತ್ಯಾದಿ) |
| 9 | ಮಧ್ಯಾಹ್ನ:2.45 ರಿಂದ 3.30 | ಸಂಜೆಯ ಲಘುಉಪಹಾರ ವಿತರಿಸಿ, ಮಕ್ಕಳನ್ನು ಪಾಲಕರ ಜೊತೆ ಕಳುಹಿಸಿ ಕೊಡುವುದು. |

**ಮೇಲ್ಕಂಡ ವೇಳಾಪಟ್ಟಿಯು ಮಾದರಿಯಾಗಿದ್ದು, ಗ್ರಾಮ ಪಂಚಾಯಿತಿಗಳು ಅಗತ್ಯತೆಗೆ ತಕ್ಕಂತೆ ಬದಲಾಯಿಸಿಕೊಳ್ಳುವುದು.**

# ಅನುಬಂಧ-4

## CRECE SETUP MATERIAL

| Sl. No. | Furniture | Quantity | Specification | | Sample Picture |
|---|---|---|---|---|---|
| 1. | Wooden Cradle | 2 | Mobile Crèches wooden Jhula | |  |
| 2. | Almirah | 1 | (as per available space) | |  |
| 3. | Creche Changing Table with cabinets (drawers) | 1 | 2 x4ft | |  |

| Sl. No. | Electrical Items | Quantity | Specification | Sample Picture |
|---|---|---|---|---|
| | **Important non-electrical items** | | | - |

| | | | | |
|---|---|---|---|---|
| 1. | Gas Stove | 1 | | - |
| 2. | Gas Cylinder | 1 | | - |
| 3. | Lock and Key | 1 | | - |
| 4. | Mirror | 1 | | - |
| 5. | Wall Clock | 1 | | - |

| Sl. No. | For Storage | Quantity | Specification | Sample Picture |
|---|---|---|---|---|
| 1. | Canisters | 4 | 10 kg(max) |  |
| 2. | Plastic storage containers | 4 | 1kg |  |
| 3. | Oil dispenser | 1 | ½Ltr |  |
| 4. | Spice Container | 1 | |  |

| | | | | |
|---|---|---|---|---|
| 5. | Basket with holes and slots for drying plates and bowls | 1 | |  |
| 6. | Rectangular plastic containers for toys | 2 | 1to 2 kg |  |

| Sl. No. | Nutrition Utensils for cooking And Serving | Quantity | Specification | Sample pictures |
|---|---|---|---|---|
| 1. | Stove Lighter | 1 | | - |
| 2. | Pateela with lid | 1 | 3ltr and ltr. |  |
| 3. | Pressure Cooker | 1 | 15ltr | |
| 4. | Heavy base Kadhaai | 1 | 13inchwidth+8 Inch depth |  |

| | | | | |
|---|---|---|---|---|
| 5. | Ladle | 2 | Medium Size |  |
| 6. | Ladle with holes | 1 | Medium Size |  |
| 7. | Grater | 1 | Medium Size |  |
| 8. | Knife | 1 | Medium Size |  |
| 9. | Big Round Sieve | 1 | Medium Size |  |
| 10. | Beater | 1 | |  |
| 11. | Sieve | NO | Large Size |  |

| | | | | |
|---|---|---|---|---|
| 12. | Tea Sieve | 1 | Medium size |  |
| 13. | Measuring Cup Set | 1 | Different sizes |  |
| 14. | Measuring Mug | 1 | |  |
| 15. | Glass | 15 | Medium Size (250ml) |  |
| 16. | Plate | 15 | Medium Size |  |
| 17. | Teaspoons | 30 | |  |

| | | | | |
|---|---|---|---|---|
| 18. | Bowl | 30 | Medium Size |  |

| Sl. No. | For Hygiene | Quantity | Specification | Sample Picture |
|---|---|---|---|---|
| 1. | Bucket | 2 | 20ltr | - |
| 2. | Mugs | 2 | | - |
| 3. | Mops | 6 | |  |
| 4. | Brooms (seek jhaadu phooljhaadu) | 2 | 1each |  |
| 5. | Steel Chilamchi | 4 | Diameter-12 inch,Height-8inch |  |
| 6. | Dustbins with lid | 2 | |  |

| | | | | |
|---|---|---|---|---|
| 7. | Dust Pan | 1 | |  |
| 8. | Soap Dish | 2 | |  |
| 9. | Plastic Rope for drying clothes | 1 roll | 20 meters |  |
| 10. | Brush | 1 | |  |
| 11. | Nail cutters | 2 | | - |
| 12. | Combs | 2 | | - |

| Sl. No. | For Health | Quantity | Specification | Sample Picture |
|---|---|---|---|---|
| 1. | Digital Weighing Scale | 1 | |  |

| | | | | |
|---|---|---|---|---|
| 2. | Salter scale | 1 | |  |
| 3. | Stadiometer | 1 | |  |
| 4. | MUAC measuring tool | 1 | |  |
| 5. | Steel Trays (for medicines) | 2 | |  |
| 6. | First Aid Box | 1 | |  |

| | | | | |
|---|---|---|---|---|
| 7. | Normal Digital Thermometer | 1 | |  |
| 8. | Torch | 1 | |  |

| Sl. No. | For Safety and Protection | Quantity | Specification | Sample Picture |
|---|---|---|---|---|
| 1. | Sand Bucket | 1 | |   |

| Sl. No. | Other Linens | Quantity | Specification | Sample Picture |
|---|---|---|---|---|
| 1. | Plastic Sheets | 4 | 2 colors-6x6ft | - |

| | | | | |
|---|---|---|---|---|
| 2. | Cradle Cloth | 4 | | (as per sample) |
| 3. | Dari/Jamkhana | 2 | 8x10 ft | - |
| 4. | Double Bedsheets | 2 | | - |
| 5. | Mats | 6 | (double bedsize) | - |
| 6. | Blankets | 4 | (single bedsize) | - |

| Sl. No. | Linens for Children | Quantity | Specification | Sample Picture |
|---|---|---|---|---|
| 1. | Medium size towels | 2 | 20x40inches | - |
| 2. | Small size towels | 30 | 6x6inches | - |
| 3. | Bibs | 30 | | - |
| 4. | Average children size Half pants and T. Shirts | 12+12 | | - |

| Sl. No. | Pre-School Learning Kit | Quantity | Specification | Sample Picture |
|---|---|---|---|---|
| 1. | Stringing beads | 2packets | | (withholesof2sizes-Large) |
| 2. | Blocks(wooden) | 4sets | Medium Size | Colourful |
| 3. | Ring Minar | 4sets | | - |
| 4. | Balls | 2ofeachsize | Large and Medium | - |
| 5. | Dolls (good quality) | 2 | 2- female2 male | - |
| 6. | Kitchen set | 1 | | - |
| 7. | Toolset | 1 | | - |
| 8. | Plumber set | 1 | | - |
| 9. | Doctor Set | 1 | | - |
| 10. | String toys | 4 | | - |
| 11. | Rattles | 4 | | - |

| Sl. No. | Other Material | Quantity | Specification | Sample Picture |
|---|---|---|---|---|
| 1. | Dhaphli/Khanjara | 1 | | - |

**The below materials to be used for crèche decoration and set-up by a worker**

| Sl. No. | Stationery Items | Quantity | Specification | Sample Picture |
|---|---|---|---|---|
| 1. | Scales | 1 | 3ofeachsize | 12inchand6inch |
| 2. | Pencils | 2 | | - |
| 3. | Erasers | 2 | | - |
| 4. | Sharpeners | 2 | | - |
| 5. | Crayons | 15 | | - |
| 6. | Markers | 2each | Blue, black, red and green | - |
| 7. | Sketch Pens | 6sets | 12colorsets | - |
| 8. | Child friendly paint colors | 2 boxes | Set of 12colors | - |
| 9. | Plastic bowls | 6 | Small size (for mixing colours) | - |
| 10. | Glaze paper | 1dozens | Different colours | - |
| 11. | Kite paper | 1dozens | Different colours | - |
| 12. | Sutli | 2rolls | | - |
| 13. | Fevicol | 1 | 1Ltr | - |
| 14. | Fevicol sticks | 4 | | - |
| 15. | Cello tape | 1 | | - |
| 16. | Tape roll | 1 | | - |
| 17. | Stickers (smileys, stars) | 1packet | For Work sheets | - |

| | | | | |
|---|---|---|---|---|
| 18. | Stamps (smileys, stars etc.) with stamp pads | 1 | For children | - |
| 19. | Stapler | 1 | | - |
| 20. | Calculator | 1 | | - |
| 21. | A4sizePaper set | 1bundle | | - |
| 22. | White Chalk | 2 boxes | | - |
| 23. | Colored Chalks | 2 boxes | | - |
| 24. | Scissors | 2 pairs | For Workers | - |
| 25. | Display Boards | 2 | 3x4 ft | - |
| 26. | Stock register | 1 | | - |
| 27. | Master register | 1 | | - |
| 28. | Attendance register | 3 | | - |
| 29. | Record copies | 6 | | - |

<u>ಅನುಬಂಧ-5</u>

## ಕೂಸಿನ ಮನೆ ಲೋಗೊ

ಕೂಸಿನ ಮನೆ